
ಕನ್ನಡಪ್ರಭ
ಶನಿವಾರ 9.05.2026

ಗರಿಷ್ಠ 34°c | ಕನಿಷ್ಠ 23°c



ಶ್ರೀ ಶನಿ ಮಹಾತ್ಮ ದೇವಸ್ಥಾನದಲ್ಲಿ ಕಳ್ಳತನ

ಶಿರಾ: ತಾಲೂಕು ಬುಕ್ಕಾಪಟ್ಟಣ ಹೋಬಳಿ ಕಿಲಾರದಹಳ್ಳಿ ಗ್ರಾಮದ ಶ್ರೀ ಶನಿ ಮಹಾತ್ಮ ದೇವಸ್ಥಾನದಲ್ಲಿ ಕಳ್ಳರು ಹುಂಡಿಯನ್ನು ದೋಚಿ ಪರಾರಿಯಾದ ಘಟನೆ ಗುರುವಾರ ಬೆಳಕಿಗೆ ಬಂದಿದೆ. ಕಿಲಾರದಹಳ್ಳಿ ಮಣ್ಣಮ್ಮನ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಶನಿ ಮಹಾತ್ಮ ದೇವಸ್ಥಾನದಲ್ಲಿ ಗುರುವಾರ ಬೆಳಗಿನ ಜಾವ ಹುಂಡಿಯಲ್ಲಿದ್ದ ಹಣವನ್ನು ದೋಚಿ ಕಳ್ಳರು ಪರಾರಿಯಾಗಿದ್ದಾರೆ. ಈ ಕುರಿತು ಶಿರಾ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಬುಕ್ಕಾಪಟ್ಟಣ ಸುತ್ತಮುತ್ತ ಕಳ್ಳತನ ದಂತಹ ಪ್ರಕರಣಗಳು ಜಾಸ್ತಿ ಆಗುತ್ತಿದ್ದು, ಗ್ರಾಮಸ್ಥರಲ್ಲಿ ಹಾಗೂ ಸಾರ್ವಜನಿಕರಲ್ಲಿ ಆತಂಕ ಮನೆ ಮಾಡಿದೆ . ಆದಷ್ಟು ಶೀಘ್ರವಾಗಿ ಕಳ್ಳರನ್ನು ಪತ್ತೆ ಹಚ್ಚಿ ಗ್ರಾಮಸ್ಥರ ಆತಂಕ ದೂರಗೊಳಿಸಬೇಕಾಗಿ ಸಾರ್ವಜನಿಕರು ಮನವಿ ಮಾಡಿಕೊಂಡಿದ್ದಾರೆ.



ಶಿರಾ ತಾಲೂಕಿನ ಬಂದಕುಂಟೆ ಹಾಲು ಉತ್ಪಾದಕರ ಸಂಘದ ನೂತನ ಅಧ್ಯಕ್ಷರಾಗಿ ಉಮೇಶ್, ಉಪಾಧ್ಯಕ್ಷರಾಗಿ ಮಹಾಲಿಂಗನಾಯಕ ಅವಿರೋಧವಾಗಿ ಶುಕ್ರವಾರ ಆಯ್ಕೆಯಾಗಿ ಅಭಿನಂದನೆ ಸ್ವೀಕರಿಸಿದರು. ಈ ವೇಳೆ ಪ್ರಕಾಶ್, ಚಂದ್ರಣ್ಣ, ರಾಮಣ್ಣ, ತಿಪ್ಪೇಸ್ವಾಮಿ, ತಾಯಮ್ಮ, ರಂಗನಾಥಪ್ಪ ಇದ್ದರು.



ಗುಬ್ಬಿ ತಾಲೂಕು ಕಲ್ಲೂರು ಗ್ರಾಮದಲ್ಲಿ 93ನೇ ಶ್ರೀ ರಾಮ ಸಪ್ತಾಹದಂಗವಾಗಿ ಲೋಕಕಲ್ಯಾಣಾರ್ಥ ಶ್ರೀರಾಮ ಮಂದಿರದಲ್ಲಿ ದುರ್ಗಾ ಹೋಮ, ರಾಮ ತಾರಕ ಹೋಮ, ವಿಶೇಷವಾಗಿ ಸಾಲಿಗ್ರಾಮ ಪೂಜೆ ಪೂಜೆಯನ್ನು ಹಮ್ಮಿಕೊಳ್ಳಲಾಯಿತು. ನಂತರ ಮಹಾಮಂಗಳಾರತಿ ಪ್ರಸಾದ ನೀಡಲಾಯಿತು.

ಸುದ್ದಿ ಸಿಂಚನ

ವೇತನ ಬಿಡುಗಡೆಗೆ ಶಿಕ್ಷಕರ ಆಗ್ರಹ

ಕುಣಿಗಲ್: ಅನುದಾನಿತ ಶಾಲಾ ಶಿಕ್ಷಕರಿಗೆ ವೇತನ ಪಾವತಿ ಆಗದೆ ನೌಕರರು ಸಂಕಷ್ಟದಲ್ಲಿದ್ದಾರೆ. ತಕ್ಷಣ ಅನುದಾನ ಪಾವತಿ ಮಾಡುವಂತೆ ಕರ್ನಾಟಕ ರಾಜ್ಯ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಸಂಘ ದ ರಾಜ್ಯ ಉಪಾಧ್ಯಕ್ಷ ಪ್ರಸಾದ್ ನಿಡಸಾಲೆ ಒತ್ತಾಯಿಸಿದ್ದಾರೆ.
ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅನುದಾನಿತ ನೌಕರರಿಗೆ ಕಳೆದ ಎರಡು ತಿಂಗಳುಗಳಿಂದ ವೇತನಪಾವತಿಯಾಗಿಲ್ಲ. ಇದರಿಂದಾಗಿ ಜೀವನನಡೆಸಲು ಸಂಕಷ್ಟವಾಗಿದೆ. ಈ ಕೂಡಲೇ ನೌಕರರಿಗೆ ವೇತನ ನೀಡುವಂತೆ ಕ್ರಮವಹಿಸುವುದು ಹಾಗೂ ಸರ್ಕಾರಿ ನೌಕರರ ಮಾದರಿಯಲ್ಲಿ 1ನೇ ತಾರೀಖಿನಂದು ವೇತನ ಪಾವತಿಯಾಗುವಂತೆ ವ್ಯವಸ್ಥೆ ಮಾಡಬೇಕು.
ಸರ್ಕಾರಿ ಶಾಲಾ ಮಕ್ಕಳಿಗೆ ನೀಡುವ ಸಮವಸ್ತ್ರ ಶು ಟೈ ಹಾಗೂ ಇತರೆ ಸೌಲಭ್ಯಗಳನ್ನು ಅನುದಾನಿತ ವಿದ್ಯಾರ್ಥಿಗಳಿಗೂ ವಿಸ್ತರಿಸಿ ಈ ಮಲತಾಯಿ ಧೋರಣೆಯನ್ನು ಕೈ ಬಿಟ್ಟು ಸಾಮಾಜಿಕ ನ್ಯಾಯ ನೀಡುವಂತೆ ಕೋರಿದ್ದಾರೆ.

ನಗರ ಸಾರಿಗೆ ವ್ಯವಸ್ಥೆಗೆ ಒತ್ತಾಯ

ತಿಪಟೂರು : ನಗರವು ಪ್ರಮುಖ ವಾಣಿಜ್ಯ ನಗರಿ ಮತ್ತು ಶೈಕ್ಷಣಿಕ ಕೇಂದ್ರದ ತೌರೂರಾಗಿದ್ದು, ಇತ್ತೀಚೆಗೆ ನಗರವ್ಯಾಪ್ತಿ ವಿಸ್ತಾರವಾಗಿ ಬೆಳೆದಿರುವುದಲ್ಲದೆ, ಜನಸಂದಣಿ ತೀವ್ರ ಗತಿಯಲ್ಲಿ ಹೆಚ್ಚುತ್ತಿರುವುದರಿಂದ ನಗರ ಸಾರಿಗೆ ವ್ಯವಸ್ಥೆ ಮಾಡಬೇಕೆಂದು ತಾಲೂಕು ನಿವೃತ್ತ ನೌಕರರ ಸಂಘವು ತಾಲೂಕು ಆಡಳಿತ ಮತ್ತು ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಒತ್ತಾಯಿಸಿದೆ. ದೇಶದಲ್ಲೇ ಪ್ರಮುಖ ಕೊಬ್ಬರಿ ಮಾರುಕಟ್ಟೆ ತಿಪಟೂರಿನಲ್ಲಿದ್ದು ಸುಮಾರು ಹತ್ತಾರು ತಾಲೂಕುಗಳಿಗೂ ಹೆಚ್ಚು ಭಾಗಗಳಿಂದ ರೈತರು ಮಾರುಕಟ್ಟೆಗೆ ಬರುತ್ತಾರೆ. ಹತ್ತಾರು ಶಾಲಾ ಕಾಲೇಜುಗಳಿದ್ದು ವಿದ್ಯಾರ್ಥಿಗಳು ನಡೆದುಕೊಂಡೇ ಹೋಗಬೇಕು. ಇಲ್ಲವೇ ದುಬಾರಿ ಹಣ ತೆತ್ತು ಆಟೋಗಳಲ್ಲಿ ಓಡಾಡಬೇಕಿದೆ. ನಗರಕ್ಕೆ ಹೊಂದಿಕೊಂಡಿರುವ ಬಡಾವಣೆಗಳು ಅಕ್ಕಪಕ್ಕದ ಗ್ರಾಮಗಳಿಗೆ ಹೋಗಿ ಬರಲು ಬಹಳ ಕಷ್ಟವಾಗುತ್ತಿದೆ. ಆಟೋ ರಿಕ್ಷಾದವರು ಪ್ರಯಾಣದರವನ್ನು ದಿನೇ ದಿನೇ ಹೆಚ್ಚಿಸುತ್ತಿದ್ದು ಜನಸಾಮಾನ್ಯರಿಗೆ ಆರ್ಥಿಕ ಹೊರೆ ವಿಪರೀತವಾಗಿದೆ. ಆದ್ದರಿಂದ ತಿಪಟೂರು ಬಸ್ ನಿಲ್ದಾಣದಿಂದ ಮಾದೀಹಳ್ಳಿ, ಅಯ್ಯನಬಾವಿ, ಬಿದರೆಗುಡಿ, ಮಾರನಗೆರೆ, ಮಡೆನೂರು, ಕೋಟನಾಯಕನಹಳ್ಳಿ, ಹಾಲ್ಕುರಿಕೆ, ಹೊನ್ನವಳ್ಳಿ, ಚಿಂದೇನಹಳ್ಳಿಗಡಿ, ಶೆಟ್ಟೀಕೆರೆ, ಕೆರೆಗೋಡಿ-ರಂಗಾಪುರ, ದಸರೀಘಟ್ಟ, ನೊಣವಿನಕೆರೆ, ಕೆ.ಬಿ. ಕ್ರಾಸ್ ಮೊದಲಾದ ಸ್ಥಳಗಳ ಮಾರ್ಗಗಳಿಗೆ ನಗರ ಸಾರಿಗೆ ವ್ಯವಸ್ಥೆ ಮಾಡುವ ಕ್ರಮಕ್ಕೆಗೊಂಡು ಅಶಕ್ತರು, ವಯೋವೃದ್ಧರೂ, ಮಹಿಳೆಯರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ತಾಲೂಕು ನಿವೃತ್ತ ನೌಕರರ ಸಂಘವು ತಾಲೂಕು ಆಡಳಿತಕ್ಕೆ ಪತ್ರಿಕಾ ಪ್ರಕಟಣೆಯ ಮೂಲಕ ಒತ್ತಾಯಿಸಿದೆ.

ಶೇ.5ರಷ್ಟು ರಿಯಾಯಿತಿಗೆ ಅವಕಾಶ: ಪೌರಾಯುಕ್ತ

ಶಿರಾ: ನಗರಸಭಾ ವ್ಯಾಪ್ತಿಯ ಆಸ್ತಿ ಮಾಲೀಕರು ಪ್ರಸಕ್ತ 2026-27ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸಿದಲ್ಲಿ ಶೇ.5ರಷ್ಟು ರಿಯಾಯಿತಿ ಕಲ್ಪಿಸಿರುವ ಕಾಲಾವಕಾಶವನ್ನು 31ರವರೆಗೆ ವಿಸ್ತರಿಸಲಾಗಿದೆ ಎಂದು ಪೌರಾಯುಕ್ತ ರುದ್ರೇಶ್.ಕೆ. ತಿಳಿಸಿದ್ದಾರೆ. ತೆರಿಗೆಯನ್ನು ನಗರಸಭೆ ಕಚೇರಿ ಆವರಣದಲ್ಲಿರುವ ಬ್ಯಾಂಕ್ ಪಾವತಿ ಕೌಂಟರ್‌ನಲ್ಲಿ ನೇರವಾಗಿ ಪಾವತಿಸಿ ರಸೀದಿ ಪಡೆಯಬಹುದಾಗಿದೆ. ಹಾಗೂ ಬಿಬಿಪಿಎಸ್ (ಗೂಗಲ್ ಪೇ, ಫೋನ್ ಪೇ) ಆನ್ಲೈನ್ ಮೂಲಕ ಸಹ ಪಾವತಿಸಬಹುದು. ಆಸ್ತಿ ಮಾಲೀಕರು ಮೇ 31ರೊಳಗಾಗಿ ಆಸ್ತಿ ತೆರಿಗೆಯನ್ನು ಪಾವತಿಸಿ ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ನಗರದ ಅಭಿವೃದ್ಧಿಗೆ ಸಹಕರಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಕಲೆಗೆ ಭಾವನೆ, ವಿಜ್ಞಾನಕ್ಕೆ ತರ್ಕವೇ ಮುಖ್ಯ

ಕನ್ನಡದ ಬರಹಗಾರ್ತಿ, ಕವಯಿತ್ರಿ ಸಂಧ್ಯಾರಾಣಿ | ಕಲ್ಪತರು ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಲ್ಪೋತ್ಸವ –2026 ಉದ್ಘಾಟನೆ

• **ಕನ್ನಡಪ್ರಭವಾರ್ತೆ** ತಿಪಟೂರು

ಸಂಗೀತ ಕಣ್ಣಿಗೆ ಕಾಣುವುದಿಲ್ಲವಾದರೂ ಅದನ್ನು ಆನಂದದಿಂದಭಾವಪರವಶರಾಗಿಆಸ್ವಾದಿಸಬಹುದು. ಅದೇ ವಿಜ್ಞಾನಕಣ್ಣಿಗೆಕಾಣುತ್ತದೆಯಾದರೂ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಆದ್ದರಿಂದ ಕಲೆಗೆ ಭಾವನೆ ಮುಖ್ಯವಾದರೆ, ವಿಜ್ಞಾನಕ್ಕೆ ತರ್ಕವೇ ಮುಖ್ಯ ಎಂದು ಕನ್ನಡದ ಪ್ರಸಿದ್ಧ ಬರಹಗಾರ್ತಿ ಹಾಗೂ ಕವಯಿತ್ರಿ ಸಂಧ್ಯಾರಾಣಿ ಎನ್. ತಿಳಿಸಿದರು.

ನಗರದಕಲ್ಪತರುಎಂಜಿನಿಯರಿಂಗ್‌ಕಾಲೇಜಿನಲ್ಲಿ ಶುಕ್ರವಾರ ಪ್ರಾರಂಭವಾದ ಕಲ್ಪೋತ್ಸವ-2026 ಉದ್ಘಾಟಿಸಿ ಮಾತನಾಡಿದ ಅವರು ಕಲೆಯು ಪ್ರತಿಯೊಬ್ಬರ ಜೀವನದಲ್ಲಿ ಅಗತ್ಯ. ಅದು ಒಂದು ಅಭಿವ್ಯಕ್ತಿ ಮಾಧ್ಯಮವಾಗಿದೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕಲೆಯು ಒತ್ತಡವನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ. ಕಲೆಗೆ ಕರ್ತದ ಅವಶ್ಯಕತೆಯಿಲ್ಲ, ಆದರೆ ಲ್ಯಾಟರಲ್ ಥಿಂಕಿಂಗ್ ನಂತಹ ಕೌಶಲ್ಯವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಆತ್ಮವಿಶ್ವಾಸದ ಕೊರತೆಯಿರುವವರು ಕಲೆಯಲ್ಲಿತೊಡಗಿಸಿಕೊಳ್ಳಿ. ಇದುವೇದಿಕೆಭಯವನ್ನು ದೂರಗೊಳಿಸಿ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಕುವೆಂಪುರವರು ವಿದ್ಯಾವಂತರಿಗೆ ದಾರಿದೀಪವಾದರೆ, ಡಾ. ರಾಜಕುಮಾರ್‌ರವರು ಓದು ಬರಹ ಬಾರದವರಿಗೆ ದಾರಿದೀಪವಾದರು. ನಮಗೆಇಷ್ಟಇರಲಿಇಲ್ಲದಿರಲಿ. ಕಲೆ ನಮಗೇ ತಿಳಿಯದಂತೆ ನಮ್ಮ ಜೀವನದಲ್ಲಿ ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲೂ ಒತ್ತಡ ನಿವಾರಣೆಗೆ ಯಾವುದೇ ರೂಪದಲ್ಲಿಯಾದರೂ ಕಲೆ ಪ್ರಮುಖ ಪಾತ್ರ ವಹಿಸುತ್ತದೆ. ರಾಜಸ್ಥಾನದ ಕೋಟಾದಲ್ಲಿದೇಶದಐಐಟಿಗಳಿಗೆಹಾಗೂಮೆಡಿಕಲ್ ಕೋರ್ಸ್ ಪ್ರವೇಶಕ್ಕೆ ವಿದ್ಯಾರ್ಥಿಗಳನ್ನು ತಯಾರು ಮಾಡಲಾಗುತ್ತಿದೆ. ಅಲ್ಲಿನ ವಿದ್ಯಾರ್ಥಿಗಳು ಬಹಳ ಒತ್ತಡದಲ್ಲಿರುತ್ತಾರೆಎಂದುಪತ್ರಿಕಾಸಮೀಕ್ಷೆತಿಳಿಸಿದೆ. ಕೇವಲ ಓದು ಓದು ಎಂಬ ಒತ್ತಡದಿಂದ ಅವರು ವಿಚಲಿತರಾಗುತ್ತಿದ್ದು, ಅವರಿಗೂಕಲೆಒತ್ತಡನಿವಾರಕ ಆಗಬಹುದು ಎಂದರು.

ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ.ರಕ್ಷಿತ್‌ಗೌಡಇವರುಮಾತನಾಡಿ, ವಿದ್ಯಾರ್ಥಿಗಳು ಓದಿನ ಒತ್ತಡದ ನಡುವೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದನ್ನು ಮರೆಯಬಾರದು. ತಂದೆ ತಾಯಿಗಳನ್ನು ಸದಾ ಗೌರವಿಸಿ, ಜೀವನದಲ್ಲಿ ಹಣಕ್ಕಿಂತ ಮನಃಸಂತೋಷವೇ ಮುಖ್ಯ ಎಂದರು.

ಪ್ರಾಂಶುಪಾಲ ಎಚ್.ಸಿ.ಸತೀಶ್‌ಕುಮಾರ್ ಮಾತನಾಡಿ ಈ ಎರಡು ದಿನಗಳ ಕಲ್ಪೋತ್ಸವದಲ್ಲಿ ತಮ್ಮಲ್ಲಿ ಅಡಗಿರುವ ಕಲೆಯನ್ನು ಪ್ರದರ್ಶಿಸುವ ಸಮಯ ಬಂದಿದೆ. ವಿವಿಧತೆಯಲ್ಲಿ ಏಕತೆಯ ಪ್ರದರ್ಶನ ಬಹಳ ಮುಖ್ಯ. ಈ ವೇದಿಕೆಯನ್ನು ನಿಮಗಾಗಿನಿರ್ಮಿಸಲಾಗಿದ್ದುಎಲ್ಲರೂಇದರಸದ್ಬಳಕೆ ಮಾಡಿಕೊಳ್ಳಿ ಎಂದರು. ಸಂಸ್ಥೆಯ ಉಪಾಧ್ಯಕ್ಷ ಬಾಗೇಪಲ್ಲಿ ನಟರಾಜು ಮಾತನಾಡಿ ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರದಲ್ಲೂ ಉನ್ನತ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳು ಓದು ಮಾತ್ರವಲ್ಲದೆ ತಮ್ಮ ಕಲೆಯನ್ನು ಸದಾ ಇಂತಹ ಕಾರ್ಯಕ್ರಮಗಳ ಮೂಲಕ ಅಭಿವ್ಯಕ್ತಗೊಳಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕಲ್ಪತರು ವಿದ್ಯಾಸಂಸ್ಥೆಯ ಖಜಾಂಚಿ ಟಿ.ಎಸ್.ಶಿವಪ್ರಸಾದ್, ಕಾರ್ಯದರ್ಶಿಗಳಾದ ಜಿ.ಎಸ್.ಉಮಾಶಂಕರ್, ಎಂ.ಆರ್. ಸಂಗಮೇಶ್, ಟಿ.ಯು.ಜಗದೀಶಮೂರ್ತಿ, ಚಂದ್ರಕಲಾ ಮತ್ತಿತರರು ಉಪಸ್ಥಿತರಿದ್ದರು.



ತಿಪಟೂರಿನ ಕಲ್ಪತರು ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಲ್ಪೋತ್ಸವ-2026ನ್ನು ಕನ್ನಡ ಬರಹಗಾರ್ತಿ, ಕವಯಿತ್ರಿ ಸಂಧ್ಯಾರಾಣಿ ಎನ್. ಉದ್ಘಾಟಿಸಿದರು.

ದೇವಾಲಯಗಳು ಆಧ್ಯಾತ್ಮಿಕ ಮೌಲ್ಯಗಳನ್ನು ಉಳಿಸುವ ಕೇಂದ್ರ

ಶ್ರೀ ರಂಗನಾಥಸ್ವಾಮಿ ದೇವಾಲಯದ ಉದ್ಘಾಟನೆ, ನಾಗಪ್ರತಿಷ್ಠಾಪನಾ ಮಹೋತ್ಸವ

• **ಕನ್ನಡಪ್ರಭ ವಾರ್ತೆ** ಶಿರಾ

ಗ್ರಾಮೀಣ ಪ್ರದೇಶಗಳಲ್ಲಿ ದೇವಾಲಯಗಳು ಕೇವಲ ಪೂಜಾ ಸ್ಥಳಗಳಲ್ಲ, ಸಮಾಜದ ಐಕ್ಯತೆ, ಸಂಸ್ಕೃತಿ ಹಾಗೂ ಆಧ್ಯಾತ್ಮಿಕಮೌಲ್ಯಗಳನ್ನುಉಳಿಸುವಶಕ್ತಿಕೇಂದ್ರಗಳಾಗಿವೆ ಯುವಪೀಳಿಗೆ ಭಾರತೀಯ ಸಂಸ್ಕೃತಿ, ಧಾರ್ಮಿಕ ನಂಬಿಕೆಗಳು ಹಾಗೂ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿಅಳವಡಿಸಿಕೊಳ್ಳಬೇಕುಎಂದುಎಂದುಮಾಜಿ ಶಾಸಕ ಡಾ.ಸಿ.ಎಂ. ರಾಜೇಶ್ ಗೌಡ ಹೇಳಿದರು.

ಶಿರಾ ತಾಲೂಕಿನ ದ್ವಾರನಕುಂಟೆ ಗ್ರಾಮದಲ್ಲಿ ಗುರುವಾರನಡೆದಶ್ರೀರಂಗನಾಥಸ್ವಾಮಿದೇವಾಲಯದ ಉದ್ಘಾಟನಾ ಹಾಗೂ ನಾಗಪ್ರತಿಷ್ಠಾಪನಾ ಮಹೋತ್ಸವ ದಲ್ಲಿ ಪಾಲ್ಗೊಂಡು ಮಾತನಾಡಿದರು.

ಶ್ರೀರಂಗನಾಥಸ್ವಾಮಿಯವರಲ್ಲಿ ಉತ್ತಮ ಮಳೆಯಾಗಲಿ, ರೈತ ಸಮುದಾಯದ ಮೇಲೆ ಪ್ರಕೃತಿಯ ಕೃಪೆಸದಾಇರಲಿಹಾಗೂಈವರ್ಷದಬೆಳೆಸಮೃದ್ಧಿಯಾಗಿ ಫಲಿಸಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದಾಗಿ ತಿಳಿಸಿ, ರೈತರ ಜೀವನಸುಭಿಕ್ಷವಾಗಿದ್ದು, ಗ್ರಾಮೀಣಆರ್ಥಿಕತೆಮತ್ತಷ್ಟು ಬಲವಾಗಲೆಂದು ಆಶಿಸುವುದಾಗಿ ಹೇಳಿದರು.

ನಿವೃತ್ತಶಿಕ್ಷಕದ್ವಾರನಕುಂಟೆಡಾ.ಲಕ್ಷ್ಮಣ್‌ಮಾತನಾಡಿ, ಡಾ.ರಾಜೇಶ್ ಗೌಡರು ಶಾಸಕರಾಗಿದ್ದ ಅವಧಿಯಲ್ಲಿ ದ್ವಾರನಕುಂಟೆ ಗ್ರಾಮದ ಅಭಿವೃದ್ಧಿಗೆ ನೀಡಿದ ಅನೇಕ ಕೊಡುಗೆಗಳನ್ನು ಸ್ಮರಿಸಿದರು. ಶ್ರೀ ರಂಗನಾಥಸ್ವಾಮಿ ದೇವಾಲಯನಿರ್ಮಾಣಕ್ಕಾಗಿ ಶಾಸಕರನಿಧಿಯಿಂದರೂ. 2.5 ಲಕ್ಷ ಅನುದಾನ ನೀಡಿದ್ದನ್ನು ಅವರು ಕೃತಜ್ಞತೆಯಿಂದ ನೆನಪಿಸಿಕೊಂಡರು. ಜೊತೆಗೆ ದೇವಸ್ಥಾನದ ಆವರಣದಲ್ಲಿ ಹೈಮಾಸ್ಟ್ ದೀಪ ವ್ಯವಸ್ಥೆ, ಗ್ರಾಮ ಗ್ರಂಥಾಲಯ ನಿರ್ಮಾಣ, ಶಾಲಾ ಕೊಠಡಿಗಳ ನಿರ್ಮಾಣ, ಸಿಸಿ ರಸ್ತೆ ಹಾಗೂಹುಳ್ಳಿಯಪ್ಪನಬಾವಿವಿಸ್ತರಣೆಯವರೆಗೆಡಾಂಬರ್ ರಸ್ತೆ ನಿರ್ಮಾಣಕ್ಕೆ ಸಹಕಾರ ನೀಡಿದ್ದನ್ನು ಗ್ರಾಮಸ್ಥರು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಶ್ರೀರಂಗನಾಥ ಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷ ಸೀತಣ್ಣ, ಕಾರ್ಯದರ್ಶಿ ನಂದಕುಮಾರ, ಖಜಾಂಚಿ ಕೃಷ್ಣಪ್ಪ, ಸದಸ್ಯರಾದ ಡಾ.ದ್ವಾರನ ಕುಂಟೆ ಲಕ್ಷ್ಮಣ್, ದೊಡ್ಡನರಂಗನಾಥ್, ಅಡಿಗೆಮನೆತಿಮ್ಮಯ್ಯ, ಚಿತ್ತಣ್ಣ, ಇಂಜಿನಿಯರ್‌ಕಂಬಣ್ಣ, ಡಿ.ಎಲ್. ರೇವಣ್ಣ, ಜೆ. ಹೆಚ್.ನಾಯಕ, ಗ್ರಾಮಪಂಚಾಯಿತಿಮಾಜಿಸದಸ್ಯರಾದ ಲಕ್ಷ್ಮಿಕಾಂತ್, ಬಡಗಿ ಪಾಂಡು ರಂಗಯ್ಯ, ಕೃಷ್ಣಪ್ಪ, ಜಯರಾಮಯ್ಯ, ಗೋವಿಂದರಾಜು ಗ್ರಾಮದ ಹಿರಿಯರು, ದೇವಸ್ಥಾನ ಸಮಿತಿ ಸದಸ್ಯರು, ಯುವಕರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



ಶಿರಾ ತಾಲೂಕಿನ ದ್ವಾರನಕುಂಟೆ ಗ್ರಾಮದಲ್ಲಿ ಶ್ರೀ ರಂಗನಾಥಸ್ವಾಮಿ ದೇವಾಲಯದ ಉದ್ಘಾಟನಾ ಹಾಗೂ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಮಾಜಿ ಶಾಸಕ ಡಾ.ಸಿ.ಎಂ.ರಾಜೇಶ್ ಗೌಡ ಅವರು ಭಾಗವಹಿಸಿ ಪೂಜೆ ಸಲ್ಲಿಸಿದರು.

ದೇವಸ್ಥಾನಗಳಿಂದ ಸಮಾಜದಲ್ಲಿ ಶಾಂತಿ, ಒಗ್ಗಟ್ಟು: ಚಿದಾನಂದಗೌಡ



ಸಿ ಎಂ ಜಿ ಸೂರ್ಯಬಿಂಬ ಹೈ ಮಾಸ್ಟ್ ದೀಪ ಅಳವಡಿಕೆ ಕಾರ್ಯಕ್ಕೆ ವಿಧಾನಪರಿಷತ್ ಸದಸ್ಯ ಚಿದಾನಂದ್ ಎಂ.ಗೌಡ ಅವರು ಶಂಕುಸ್ಥಾಪನೆ ನೆರವೇರಿಸಿದರು.

• **ಕನ್ನಡಪ್ರಭ ವಾರ್ತೆ** ಶಿರಾ

ದೇವಸ್ಥಾನಗಳಿಂದ ಸಮಾಜದಲ್ಲಿ ಶಾಂತಿ ಹಾಗೂ ಒಗ್ಗಟ್ಟು ಮೂಡುತ್ತದೆ. ಇಲ್ಲಿ ನಡೆಯುವ ಉತ್ಸವಗಳಿಂದ ಜ್ಯಾತ್ಯತೀತ ವ್ಯವಸ್ಥೆ ನಿರ್ಮಾಣವಾಗಿ ಸಮಾಜವು ಶಾಂತಿಯ ತೋಟವಾಗುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಚಿದಾನಂದ್ ಎಂ. ಗೌಡ ಹೇಳಿದರು.

ಅವರು ಶಿರಾ ತಾಲೂಕಿನ ದ್ವಾರನಕುಂಟೆ ಗ್ರಾಮದಲ್ಲಿನೂತನಶ್ರೀರಂಗನಾಥಸ್ವಾಮಿ ದೇವಸ್ಥಾನದಉದ್ಘಾಟನೆಮಹೋತ್ಸವದಲ್ಲಿ ಪಾಲ್ಗೊಂಡುಪೂಜೆಸಲ್ಲಿಸಿಮಾತನಾಡಿದರು. ನಂತರ ಗ್ರಾಮದ ಸಾರ್ವಜನಿಕರ ಅನುಕೂಲಕ್ಕಾಗಿ ಸಿ ಎಂ ಜಿ ಸೂರ್ಯಬಿಂಬ ಹೈ ಮಾಸ್ಟ್ ದೀಪ ಅಳವಡಿಕೆ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಗ್ರಾಮದ ಪ್ರಮುಖಸ್ಥಳದಲ್ಲಿಬೆಳಕಿನವ್ಯವಸ್ಥೆಕಲ್ಪಿಸುವ ಈ ಯೋಜನೆಯು ಸಾರ್ವಜನಿಕರ ಸಂಚಾರಕ್ಕೆ ಮತ್ತು ಸುರಕ್ಷತೆಗೆ ಹೆಚ್ಚಿನ ಅನುಕೂಲ ಮಾಡಿಕೊಡಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷಮದ್ದೇವಳ್ಳಿ ರಾಮಕೃಷ್ಣ ಮತ್ತು ಹೊನ್ನಗೊಂಡನಹಳ್ಳಿ ಚಿಕ್ಕಣ್ಣ, ಶಿರಾ ತಾಲೂಕು ಗ್ರಾಮಾಂತರ ಮಂಡಲ ಉಪಾಧ್ಯಕ್ಷರಾದ ಬಿಕೆ ರಂಗನಾಥ್ ಹಾಗೂ ವಾಜರಹಳ್ಳಿ ಕೃಷ್ಣೇಗೌಡರು, ದ್ವಾರನಕುಂಟೆ ಲಕ್ಷ್ಮಣ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದವೆಂಕಟೇಶ್, ಮುಖಂಡರಾದ ರೇವಣ್ಣ, ಯಜಮಾನ್ ಸೀತಣ್ಣ, ಕೃಷ್ಣಪ್ಪ ಮಾಸ್ಟರ್, ತಿಮ್ಮಯ್ಯ, ಮಂಜುನಾಥ್, ಬಿಜೆಪಿ ಜಯರಾಮಯ್ಯ, ಯುವ ಮುಖಂಡ ವಿರೂಪಾಕ್ಷ ಹಾಜರಿದ್ದರು.

ಪರಾಭವ ಸಂವತ್ಸರದ ಮಕ್ಕಳ ಬೇಸಿಗೆ ಶಿಬಿರ ಸಂಪನ್ನ

• **ಕನ್ನಡಪ್ರಭವಾರ್ತೆ** ತಿಪಟೂರು

ಶ್ರೀಸತ್ಯಗಣಪತಿಸೇವಾಸಂಘಟ್ರಸ್ಟ್‌ಹಾಗೂಸೊಗಡು ಜನಪದ ಹೆಜ್ಜೆ ವತಿಯಿಂದ ಪರಾಭವ ಸಂವತ್ಸರದ ಮಕ್ಕಳ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಭಾರತೀಯ ಶ್ರೀಮಂತ ಸಂಸ್ಕೃತಿ, ದೇಶ ಭಕ್ತಿ ಗೀತೆ, ಗ್ರಾಮೀಣ ಕಲೆ, ಕ್ರೀಡೆಗಳು, ಭಾಷಣ ಕಲೆ, ಪರಿಸರಅಧ್ಯಯನ, ಆರೋಗ್ಯ ಮತ್ತು ಜ್ಞಾನದಅರಿವು, ಮೂಡಲಪಾಯ ಯಕ್ಷಗಾನ ಹಾಗೂ ಪೌರಾಣಿಕ ನಾಟಕದ ತಾಲೀಮು, ಯೋಗ, ಧ್ಯಾನ, ಪ್ರಾಣಾಯಾಮ, ಸಾಂಪ್ರದಾಯಿಕ ಆಹಾರ ಪದ್ಧತಿ ಪರಿಚಯ, ಅರಿವುಮತ್ತು ತಿಳುವಳಿಕೆಯಪ್ರಯತ್ನಗಳನ್ನ ಈ ಶಿಬಿರದಲ್ಲಿ ಮಾಡಿಕೊಡಲಾಯಿತು.

ಪರಿಸರ ಅಧ್ಯಯನ, ವಿವಿಧ ವಿಷಯ, ವಿಚಾಗಳ ಜ್ಞಾನದ ಅರಿವು ಅಂಗವಾಗಿ ಮಕ್ಕಳಿಗೆ ಸಾಮಾನ್ಯ ವಿಚಾರ ಹಾಗೂ ಜಾಗೃತಿ ಮೂಡಿಸುವ ಒಂದು ಪುಟ್ಟ ಪ್ರವಾಸ ಹಮ್ಮಿಕೊಳ್ಳಲಾಗಿತ್ತು.

ಮೊದಲನೆಯದಾಗಿಕ.ರಾ.ರ.ಸಾ.ಸಂಸ್ಥೆಯಘಟಕ, ಎರಡನೇಯದಾಗಿನಗರದನಗರಸಭೆಯಕಸವಿಲೆವಾರಿ ಘಟಕ, ನಂತರ ಮೀಸೆತಿಮ್ಮನಹಳ್ಳಿ ರಸ್ತೆಯ ಆದಿಲಕ್ಷ್ಮೀ ಸೀಮೆಂಟ್ ಇಟ್ಟಿಗೆ ತಯಾರಿಕೆ ಕಾರ್ಖಾನೆ ಗೆ ಭೇಟಿ ನೀಡಲಾಯಿತು. ಪುಟ್ಟಪ್ರವಾಸಅರಿವು, ಜ್ಞಾನದಜೊತೆ ಮನಸ್ಸಿಗೆಸೊಗಸಾಗಿತ್ತೆಂದುಆಯೋಜಕರಾದಸಿರಿಗಂಧ ಗುರು, ಬೀರಸಂದ್ರ ಚಿದಾನಂದ್, ಅರಳಗುಪ್ಪೆ ಪುಟ್ಟಸ್ವಾಮಿ ತಿಳಿಸಿದ್ದಾರೆ.



ಆಶ್ರಯ ನಿವೇಶನ ಹಂಚಿಕೆಗೆ ಮಂಜೂರಾದ ಸ್ಥಳ ಪರಿಶೀಲನೆ

ಕೊರಟಗೆರೆ ತಾಲೂಕಿಗೆ ಜಿ.ಪಂ. ಸಿಇಒ ಅಶ್ವಿಜ ಭೇಟಿ



ಕೊರಟಗೆರೆ ತಾಲೂಕಿಗೆ ಜಿ.ಪಂ. ಸಿಇಒ ಅಶ್ವಿಜ ಭೇಟಿ ನೀಡಿ ಪರಿಶೀಲನೆ ನಡೆಸಿದರು.

• **ಕನ್ನಡಪ್ರಭ ವಾರ್ತೆ** ತುಮಕೂರು

ಕೊರಟಗೆರೆತಾಲೂಕಿನಎಲೆರಾಂಪುರಹಾಗೂನೀಲಗೊಂಡನಹಳ್ಳಿಗ್ರಾಮಪಂಚಾಯಿತಿ ವ್ಯಾಪ್ತಿಯವಿವಿಧಗ್ರಾಮಗಳಿಗೆಜಿಪಂಸಿಇಒಬಿ.ವಿ.ಅಶ್ವಿಜಾಅವರುಶುಕ್ರವಾರದಿಢೀರ್ ಭೇಟಿ ನೀಡಿ ಕುಡಿಯುವ ನೀರು ಹಾಗೂ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆಗೆ ಮಂಜೂರಾದ ಸ್ಥಳ ಪರಿಶೀಲನೆ ನಡೆಸಿ, ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದರು.

ಕೊರಟಗೆರೆ ತಾಲೂಕಿನ ಎಲೆರಾಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇರಕಸಂದ್ರ ಗ್ರಾಮದ ಇರಕಸಂದ್ರ ಕೆರೆ ಅಂಗಳದ ಕೊಳವೆ ಬಾವಿಯು ನೀರಿನಿಂದ ಮುಳುಗಿ ಹೂಳು ತುಂಬಿದ್ದು, ಕೊಳವೆ ಬಾವಿಯನ್ನು ಪುನಶ್ಚೇತನಗೊಳಿಸಿ ಗ್ರಾಮದ ಜನರಿಗೆ ಕುಡಿಯುವ ನೀರು ಪೂರೈಸಲು ಅಧಿಕಾರಿಗಳಿಗೆ ಸೂಚಿಸಿದ ಅವರು ಕೊರಟಗೆರೆ ತಾಲೂಕಿನ ನೀಲಗೊಂಡನಹಳ್ಳಿ ಗ್ರಾಮದ ಸರ್ವೆ ನಂಬರ್27ರಲ್ಲಿ ಮಂಜೂರಾದ 2 ಎಕರೆ ಹಾಗೂ ಸರ್ವೆ ನಂಬರ್39ರಲ್ಲಿ ನಿವೇಶನ ಹಂಚಿಕೆಗೆ ಮಂಜೂರಾದ 4 ಎಕರೆ ಜಾಗವನ್ನು ಹಾಗೂ ಸರ್ವೆ ನಂಬರ್61ರ ಸರ್ಕಾರಿ ಗೋಮಾಳದ ಸ್ಥಳಕ್ಕೂ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈಸಂದರ್ಭದಲ್ಲಿಕೊರಟಗೆರೆತಾಲೂಕುಪಂಚಾಯಿತಿಕಾರ್ಯನಿರ್ವಾಹಕಅಧಿಕಾರಿ ಅಪೂರ್ವ ಸಿ. ಅನಂತರಾಮು, ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಎಂ.ಬಿ.ಗುರುಮೂರ್ತಿ, ತಾಲೂಕು ಪಂಚಾಯಿತಿ ವಸತಿ ಶಾಖೆಯ ತಾಲೂಕು ನೋಡೆಲ್ ಅಧಿಕಾರಿ ವೈ.ಆರ್. ಶಿವಪ್ರಸನ್ನ, ಕೊರಟಗೆರೆ ಗ್ರಾಮಾಂತರ ಮತ್ತು ನಗರ ಯೋಜನಾ ಪ್ರಾಧಿಕಾರದಅಧಿಕಾರಿಧರಣೇಶ್, ಉಪತಹಸೀಲ್ದಾರ್‌ಮಧುಚಂದ್ರ, ನೀಲಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಎನ್. ಮಂಜುಳ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

ಸರ್ಕಾರಕ್ಕೆ ಆಗ್ರಹ | ಮಾಜಿ ಸಚಿವ ಸೊಗಡು ಶಿವಣ್ಣ ಸರ್ಕಾರಕ್ಕೆ ಒತ್ತಾಯ

ತುಮಕೂರು ಜಿಲ್ಲೆಗೆ ತಕ್ಷಣ ಹೇಮಾವತಿಯಿಂದ ನೀರು ಹರಿಸಿ

• **ಕನ್ನಡಪ್ರಭ ವಾರ್ತೆ** ತುಮಕೂರು

ಈ ವರ್ಷ ಇದೂವರೆಗೂ ಮಳೆ ಆಗದ ಕಾರಣ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಹೇಮಾವತಿ ಜಲಾಶಯದಲ್ಲಿ ಸಂಗ್ರಹವಿರುವ ನೀರನ್ನು ತಕ್ಷಣ ತುಮಕೂರು ಜಿಲ್ಲೆಗೆ ಹರಿಸಬೇಕು ಎಂದು ಮಾಜಿ ಸಚಿವ ಸೊಗಡು ಶಿವಣ್ಣ ಸರ್ಕಾರವನ್ನು ಒತ್ತಾಯಿಸಿದರು.

ಶುಕ್ರವಾರನಗರದಲ್ಲಿಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದಅವರು, ಗೊರೂರುಜಲಾಶಯ ದಲ್ಲಿ ಲಭ್ಯವಿರುವ ನೀರನ್ನು ಜಿಲ್ಲೆಯ ಕುಡಿಯುವ ನೀರಿನ ಉದ್ದೇಶಕ್ಕಾಗಿ ಕೂಡಲೇ ಹರಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ನೀರಾವರಿಖಾತೆಸಚಿವರೂಆದಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅವರಿಗೆ ಪತ್ರ ಬರೆದಿರುವುದಾಗಿ ಹೇಳಿದರು. ಇತ್ತೀಚೆಗೆ ತಾವು ನೀರಾವರಿ ತಜ್ಞರ ಜೊತೆ ಗೋರೂರು ಜಲಾಶಯಕ್ಕೆ ಭೇಟಿ ನೀಡಿದ್ದು, ಜಲಾಶಯದಲ್ಲಿ ಒಟ್ಟು 17.90 ಟಿಎಂಸಿನೀರುಸಂಗ್ರಹವಿದೆ. ಇದರಲ್ಲಿ 5 ಟಿಎಂಸಿಡೆಡ್‌ಸ್ಟೋರೇಜ್‌ವಾಟರ್, ಉಳಿದ 12 ಟಿಎಂಸಿ ನೀರನ್ನು ತುಮಕೂರು ಜಿಲ್ಲೆಗೆ ಕುಡಿಯುವ ನೀರಿನ ಉದ್ದೇಶಕ್ಕೆ ಹರಿಸಬೇಕು ಎಂದು ಒತ್ತಾಯಿಸಿದರು.

ಮಳೆಅಭಾವದಕಾರಣಜನ, ಜಾನುವಾರು, ಪ್ರಾಣಿಪಕ್ಷಿಗಳಿಗೂ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಟಿಬಿಸಿ ನಾಲೆ ಮುಖಾಂತರ ತುರ್ತಾಗಿ ಹೇಮಾವತಿ ನೀರು ಹರಿಸಿ ಪರಿಸ್ಥಿತಿ ನಿಯಂತ್ರಿಸಬೇಕು. ಇಲ್ಲದಿದ್ದರೆ ಸಾರ್ವಜನಿಕರೊಂದಿಗೆ ಸೇರಿ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು.

ಕಾವೇರಿ ನೀರಾವರಿ ಟ್ರಿಬ್ಯೂನಲ್ ಆದೇಶದಂತೆ ತುಮಕೂರು ಜಿಲ್ಲೆಗೆ 25.03 ಟಿಎಂಸಿ ನೀರು ಹರಿಸಬೇಕು. ಆದರೆ ಆದೇಶ ನೀಡಿ 18 ವರ್ಷಗಳಾದರೂ ನಮ್ಮ ಪಾಲಿನ ನೀರನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ. ಅಲ್ಲದೆ 18 ವರ್ಷ ಕಳೆದರೂ ತುಮಕೂರು ನಾಲಾವಲಯದಒಂದೇಒಂದುಎಕರೆಜಮೀನನ್ನುಅಚ್ಚುಕಟ್ಟುಪ್ರದೇಶವೆಂದುಘೋಷಿಸಿಲ್ಲ, ಅಲ್ಲದೆಈಬಗ್ಗೆಗೆಜೆಟ್‌ನಲ್ಲೂನೋಟಿಫಿಕೇಶನ್ ಆಗಿಲ್ಲ ಎಂದು ಸೊಗಡು ಶಿವಣ್ಣ ಹೇಳಿದರು.

18- 4- 2026 ರಂದು ಎತ್ತಿನಹೊಳೆ ಯೋಜನೆಯ ಮುಖ್ಯ ಎಂಜಿನಿಯರ್‌ರವರು ಕೆಲವುಜನಪ್ರತಿನಿಧಿಗಳಜೊತೆತುಮಕೂರಿನಲ್ಲಿ ಸಭೆ ನಡೆಸಿ, 2026ರಲ್ಲಿ ಬಾಕಿ ಇರುವ ಎಲ್ಲಾ ಕಾಮಗಾರಿಯನ್ನು ಪೂರ್ಣಗೊಳಿಸಿ, ನಾಲೆಯಲ್ಲಿ ನೀರು ಹರಿಸುವುದಾಗಿ ಹೇಳಿಕೆ ಕೊಟ್ಟಿರುತ್ತಾರೆ. ಇದು ಸಾಧ್ಯವೇ ಎನ್ನುವ ಅನುಮಾನ ಕಾಡಲಾರಂಭಿಸಿದೆ. ಕಾರಣ ಕೋಲಾರ, ಬೆಂಗಳೂರು, ಚಿಕ್ಕಬಳ್ಳಾಪುರ ಜಿಲ್ಲೆಗೆ ನಿಗದಿಯಾಗಿರುವ ನೀರು ಹರಿಸಲು ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕು, ಕೋಳಾಲಹತ್ತಿರವಿರುವಭೈರಗೊಂಡ್ಲುವಿನಲ್ಲಿ 5.75 ಟಿ.ಎಂ.ಸಿ. ಸಾಮರ್ಥ್ಯದ ಜಲಾಶಯ ನಿರ್ಮಿಸಲು ನಿರ್ಧರಿಸಿ ಅದು ಟೆಂಡರ್‌ಸಹ ಆಗಿತ್ತು. ನಂತರದ ದಿನಗಳಲ್ಲಿ ಅದನ್ನು ರದ್ದುಪಡಿಸಿ ದೊಡ್ಡಬಳ್ಳಾಪುರ ತಾಲೂಕು, ಮಚ್ಚೇನಹಳ್ಳಿ, ಶ್ರೀರಾಮನಹಳ್ಳಿಹತ್ತಿರ, 1.75 ಟಿ.ಎಂ.ಸಿ. ಸಾಮರ್ಥ್ಯದ ಜಲಾಶಯ ನಿರ್ಮಿಸಲು ಡಿ.ಪಿ.ಆರ್. ತಯಾರಿಸಲಾಯಿತು. ಆದರೆ ಸರ್ಕಾರ ಮತ್ತು ನೀರಾವರಿ ಇಲಾಖೆ ಇದುವರೆವಿಗೂ ಯಾವುದೇ ನಿರ್ದಿಷ್ಟವಾದ ನಿರ್ಧಾರ ತೆಗೆದುಕೊಳ್ಳದೆ ಮುಂದೂಡಿಕೊಂಡು ಹೋಗುತ್ತಿರುವುದು ಎಷ್ಟು ಸರಿ. ಹೀಗಿರುವಾಗ ಈ ವರ್ಷದ ಕೊನೆಯಲ್ಲಿ ಎತ್ತಿನಹೊಳೆ ಯೋಜನೆಯ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ನೀರು ಹರಿಸುವ ಹೇಳಿಕೆ ನೀಡಿರುವುದು ಜನರನ್ನು ದಾರಿ ತಪ್ಪಿಸುವ ಹೇಳಿಕೆಯಾಗಿದೆ ಎಂದು ಆರೋಪಿಸಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ಪಿ.ಮಹೇಶ್, ಸಾಮಾಜಿಕಹೋರಾಟಗಾರ ಪ್ರಭಾಕರ್‌ಮ್ಯಾಸನಾಯಕ, ಎನ್.ಆರ್.ಶ್ರೀಕಾಂತ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.




ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಸೊಗಡು ಶಿವಣ್ಣ ಮಾತನಾಡಿದರು.



ತುರುವೇಕೆರೆ ತಾಲೂಕು ಕೋಡಿನಾಗಸಂದ್ರ, ಟಿಬಿ ಕ್ರಾಸ್ ನ ಮಾರುತಿ ದೇವಾಲಯದ ಉದ್ಘಾಟನೆಗೆ ಆಗಮಿಸಿದ ಕುಮಾರಸ್ವಾಮಿಯವರನ್ನು ಜೆಡಿಎಸ್ ಕಾರ್ಯಕರ್ತನೊಬ್ಬ ಮಾರುತಿ ವೇಷತೊಟ್ಟು ಸ್ವಾಗತಿಸಿದ್ದು ವಿಶೇಷವಾಗಿತ್ತು.



ತುರುವೇಕೆರೆ ತಾಲೂಕು ಕೋಡಿನಾಗಸಂದ್ರ, ಟಿಬಿ ಕ್ರಾಸ್ ನ ಮಾರುತಿ ದೇವಾಲಯದ ಕಾರ್ಯಕ್ರಮವನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಉದ್ಘಾಟಿಸಿದರು. ಈ ವೇಳೆ ಶಾಸಕ ಕೃಷ್ಣಪ್ಪ ಸೇರಿದಂತೆ ಅನೇಕರಿದ್ದರು.



ತುರುವೇಕೆರೆ ತಾಲೂಕು ಕೋಡಿನಾಗಸಂದ್ರ, ಟಿಬಿ ಕ್ರಾಸ್ ನ ಮಾರುತಿ ದೇವಾಲಯ ಉದ್ಘಾಟನೆಗೆ ಆಗಮಿಸಿದ್ದ ಕೇಂದ್ರ ಸಚಿವ ಕುಮಾರಸ್ವಾಮಿಯವರ ಭಾವಚಿತ್ರವನ್ನು ವಿದ್ಯಾರ್ಥಿಯೊಬ್ಬ ಪೆನ್ಸಿಲ್ ನಲ್ಲಿ ಬಿಡಿಸಿರುವುದನ್ನು ಅವರಿಗೆ ಕೊಡುಗೆಯಾಗಿ ನೀಡಿದ.

ಜಿಲ್ಲೆಗೆ ಹೇಮಾವತಿ ಹರಿಸಿದ್ದು ದೇವೇಗೌಡರು

ಕೋಡಿನಾಗಸಂದ್ರ, ಟಿಬಿ ಕ್ರಾಸ್‌ನಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ

• **ಕನ್ನಡಪ್ರಭ ವಾರ್ತೆ** ತುರುವೇಕೆರೆ

ತುಮಕೂರು ಜಿಲ್ಲೆ ಇಂದು ನೀರಾವರಿಯಲ್ಲಿ ಸುಭಿಕ್ಷವಾಗಿದ್ದು ಜಿಲ್ಲೆಗೆ ಹೇಮಾವತಿಯಿಂದ 25 ಟಿಎಂಸಿ ನೀರು ಹರಿಯಲು ಕಾರಣ ಎಚ್.ಡಿ.ದೇವೇಗೌಡರು ಎಂದು ಮಾಜಿ ಮುಖ್ಯಮಂತ್ರಿ ಮತ್ತು ಕೇಂದ್ರದ ಬೃಹತ್ ಕೈಗಾರಿಕಾ ಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ತಾಲೂಕಿನ ಕೋಡಿನಾಗಸಂದ್ರ ಟಿಬಿ ಕ್ರಾಸ್ ನಲ್ಲಿ ನೂತನವಾಗಿ ಸುಮಾರು ಒಂದು ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಶ್ರೀ ವಿನಾಯಕ ಮಾರುತಿ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜಿಲ್ಲೆಯ ರೈತರ ನೋವು ನಲಿವುಗಳಿಗೆ ನಮ್ಮ ಕುಟುಂಬ ಎಂದೆಂದೂ ಸ್ಪಂದಿಸಿದೆ. ನಾಗಮಂಗಲ ಮತ್ತು ತುರುವೇಕೆರೆ ತಾಲೂಕಿನ ಮಧ್ಯೆ ಒಂದು ಕೈಗಾರಿಕೆಯನ್ನು ಸ್ಥಾಪಿಸಬೇಕೆಂಬ ಆಸೆ ನನ್ನಲ್ಲಿದೆ. ಸುಮಾರು 20 ಸಾವಿರ ಯುವಕರಿಗೆ ಉದ್ಯೋಗ ಕೊಡಬಹುದಾಗಿದೆ. ಆದರೆ ಈ ರಾಜ್ಯ ಸರ್ಕಾರ ಯಾವುದೇ ಆಸಕ್ತಿ ತೋರುತ್ತಿಲ್ಲ ಎಂದು ಬೇಸರಿಸಿದರು.

ನನಗೆ ನಿಮ್ಮ ಸೇವೆ ಮಾಡಬೇಕೆಂಬ ಉದ್ದೇಶದಿಂದಲೇ ದೇವರು ನನಗೆ 5 ಬಾರಿ ಜೀವದಾನ ಮಾಡಿದ್ದಾರೆ. ದೇವಸ್ಥಾನದಲ್ಲಿರುವುದು ಕಲ್ಲು ದೇವರಾದರೆ, ನೀವೇ ನನ್ನ ನಿಜವಾದ ದೇವರುಗಳು. ನಿಮ್ಮಗಳ ಹಾರೈಕೆಯಿಂದ ನಾನು ಇನ್ನೂ ಧೃಢಕಾಯನಾಗಿದ್ದೇನೆ. ದೇವೇಗೌಡರು ಬದುಕಿದ್ದಾಗಲೇ ರೈತರ ಪರವಾದ ಸರ್ಕಾರ ತರಬೇಕೆಂಬ ತಮ್ಮ ಆಸೆಯಿಂದಲೇ ನಿಮ್ಮ ಆಶೀರ್ವಾದದಿಂದ ನನ್ನನ್ನು ಹರಸಿದ್ದಾನೆ ಎಂದು ಕುಮಾರಸ್ವಾಮಿ ಹೇಳಿದರು.

ವೇದಿಕೆಯಲ್ಲಿ ಶಾಸಕ ಎಂ.ಟಿ.ಕೃಷ್ಣಪ್ಪ, ಚಿಕ್ಕನಾಯಕನಹಳ್ಳಿ ಶಾಸಕ ಸುರೇಶ್ ಬಾಬು, ಕೆ ಎಂ ಎಫ್ ನಿರ್ದೇಶಕ ಸಿ.ವಿ.ಮಹಲಿಂಗಯ್ಯ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ನಿಂಗಪ್ಪ, ಮಾಜಿ ಶಾಸಕ ತಿಮ್ಮರಾಯಪ್ಪ, ತಾಲೂಕು ಜೆಡಿಎಸ್ ಅಧ್ಯಕ್ಷ ದೊಡ್ಡೇಗೌಡ, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ದೊಡ್ಡಾಘಟ್ಟ ಚಂದ್ರೇಶ್, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಎಂ.ಡಿ.ರಮೇಶ್ ಗೌಡ, ಶಂಕರೇಗೌಡ, ವೆಂಕಟೇಶ್ ಕೃಷ್ಣಪ್ಪ, ರಾಜೀವ್ ಕೃಷ್ಣಪ್ಪ, ಎಐಸಿಸಿ ಸದಸ್ಯ ಸುಬ್ರಮಣಿ ಶ್ರೀಕಂಠೇಗೌಡ, ಲೀಲಾವತಿ ಗಿಡ್ಡಯ್ಯ, ಮಾದಿಹಳ್ಳಿ ಕಾಂತರಾಜ್, ಶ್ರೀ ವಿನಾಯಕ ಮಾರುತಿ ದೇವಾಲಯ ಸಮಿತಿ ಅಧ್ಯಕ್ಷ ಎನ್.ಲೋಕೇಶ್, ಉಪಾಧ್ಯಕ್ಷ ಕೆ.ರಘು, ಹನುಮಂತರಾಜು. ಕಾರ್ಯದರ್ಶಿ ಜಿ.ಡಿ. ಗಂಗಾಧರಯ್ಯ ಖಜಾಂಚಿ ಎಸ್.ಎನ್.ಚಂದ್ರಶೇಖರ್ ಸೇರಿದಂತೆ ಹಲವಾರು ಮಂದಿ ಉಪಸ್ಥಿತರಿದ್ದರು.

ಬೀದಿಗೆ ಬಂದ ತುರುವೇಕೆರೆ ಕಾರ್ಯಕರ್ತರ ಬಣ ಬಡಿದಾಟ

ಕುಮಾರಸ್ವಾಮಿ ವೇದಿಕೆ ಮೇಲೆ ಇದ್ದಾಗ ಮತ್ತು ಭಾಷಣ ಮಾಡಲು ಆರಂಭಿಸಿದಾಗ ಶಾಸಕ ಎಂ.ಟಿ.ಕೃಷ್ಣಪ್ಪನವರ ಬೆಂಬಲಿಗರು ಮತ್ತು ಮತ್ತೊಬ್ಬ ಜೆಡಿಎಸ್ ರಾಜ್ಯ ಯುವ ಜೆಡಿಎಸ್ ನ ಪ್ರಧಾನ ಕಾರ್ಯದರ್ಶಿ ದೊಡ್ಡಾಘಟ್ಟ ಚಂದ್ರೇಶ್ ರವರ ಅಭಿಮಾನಿಗಳು ಅವರವರ ಪರ ಜಯಕಾರ ಹಾಕುತ್ತಿದ್ದರು. ಭಾಷಣ ಕೇಳದ ಸ್ಥಿತಿ ನಿರ್ಮಾಣವಾಗಿತ್ತು. ಇದರಿಂದ ಬೇಸರಗೊಂಡ ಕುಮಾರಸ್ವಾಮಿ ತಾಲೂಕಿನಲ್ಲಿ ಜೆಡಿಎಸ್ ಪಕ್ಷದಲ್ಲಿ ಗೊಂದಲ ಶುರುವಾಗಿದೆ. ದಯಮಾಡಿ ಯಾರೂ ಗೊಂದಲಕ್ಕೆ ಅವಕಾಶ ಮಾಡಿಕೊಡಬೇಡಿ. ನನಗೆ ಪ್ರತಿಯೊಂದು ಕ್ಷೇತ್ರವೂ ಮುಖ್ಯವಾಗಿದೆ. ಕಷ್ಟಕಾಲದಲ್ಲಿ ಕೈಹಿಡಿದಿರುವ ನೀವು ಕುಮಾರಣ್ಣನಿಗೇ ಮತ ನೀಡುತ್ತಿರುವುದು ಎಂದು ತಿಳಿದುಕೊಳ್ಳಬೇಕು. ಕೃಷ್ಣಪ್ಪನವರನ್ನು ನಾನು 25 ವರ್ಷದಿಂದಲೂ ಬಲ್ಲೆ. ಅವರು ಪಕ್ಷಕ್ಕೆ ಅತ್ಯಂತ ನಿಷ್ಠಾವಂತರು. ಟಿಕೆಟ್ ಯಾರಿಗೆ ಕೊಡಬೇಕು ಎಂದು ಗೊತ್ತಿದೆ. ಪಕ್ಷಕ್ಕೆ ತೊಂದರೆಯುಂಟಾಗದಂತೆ ಪಕ್ಷದ ನಾಯಕರು ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕುಮಾರಸ್ವಾಮಿ ಸಭೆಯಲ್ಲಿ ಮಾತನಾಡಿ ಸಭೆಯಿಂದ ಹೊರ ಹೋಗುತ್ತಿದ್ದಂತೆ ಶಾಸಕ ಎಂ.ಟಿ.ಕೃಷ್ಣಪ್ಪ ಮತ್ತು ದೊಡ್ಡಾಘಟ್ಟ ಚಂದ್ರೇಶ್ ರವರ ಅಭಿಮಾನಿಗಳು ತಮ್ಮ ನಾಯಕರ ಪರ ಜಯಕಾರ ಹಾಕತೊಡಗಿದರು. ಟಿ.ಬಿ.ಕ್ರಾಸ್ ನ ಸರ್ಕಲ್ ನಲ್ಲಿ ಎರಡೂ ಕಡೆಯವರು ಪರಸ್ಪರ ಕೂಗಾಟದಲ್ಲಿ ತೊಡಗಿದರು. ಕೃಷ್ಣಪ್ಪನವರ ಅಭಿಮಾನಿಗಳು ಜೆಡಿಎಸ್ ಮುಖಂಡ ತ್ಯಾಗರಾಜ್ ಮತ್ತು ಮಾದಿಹಳ್ಳಿ ಕಾಂತರಾಜ್ ರವರನ್ನು ಹೆಗಲ ಮೇಲೆ ಹೊತ್ತು ದೇವೇಗೌಡ, ಕುಮಾರಸ್ವಾಮಿ ಮತ್ತು ಎಂ.ಟಿ.ಕೃಷ್ಣಪ್ಪನವರ ಪರ ಘೋಷಣೆ ಕೂಗಿದರು. ದೊಡ್ಡಾಘಟ್ಟ ಚಂದ್ರೇಶ್ ಅಭಿಮಾನಿಗಳು ಚಂದ್ರೇಶ್ ರನ್ನು ಹೆಗಲ ಮೇಲೆ ಹೊತ್ತು ಘೋಷಣೆ ಕೂಗಿದರು. ಅರ್ಧಗಂಟೆಗೂ ಹೆಚ್ಚು ಕಾಲ ಈರ್ವ ಮುಖಂಡರ ಅಭಿಮಾನಿಗಳ ಘೋಷಣೆ ಪರಾಕಾಷ್ಠೆ ಮುಟ್ಟಿತು. ಪೊಲೀಸರು ಈರ್ವ ಅಭಿಮಾನಿಗಳನ್ನು ಸಮಾಧಾನಪಡಿಸಲು ಹರಸಾಹಸ ಪಡಬೇಕಾಯಿತು.

ಸಮಾಜಕಾರ್ಯ ಸೇವಾ ಮನೋಭಾವದ ಪಯಣ

ಮಹಾರಾಷ್ಟ್ರದ ಹಿಂದುಳಿದ ವರ್ಗಗಳ ಆಯೋಗದ ಕಾರ್ಯದರ್ಶಿ, ಸಮಾಜ ವಿಜ್ಞಾನಿ ಪ್ರೊ. ಅಂಬಾದಾಸ್ ಮೋಹಿತೆ

• **ಕನ್ನಡಪ್ರಭ ವಾರ್ತೆ** ತುಮಕೂರು

ಸಮಾಜಕಾರ್ಯ ಎಂಬುದು ಕೇವಲ ಒಂದು ವೃತ್ತಿಯಲ್ಲ, ಅದು ಸಮಾಜದ ಕಟ್ಟಕಡೆಯ ವ್ಯಕ್ತಿಯ ಬದುಕಿನಲ್ಲಿ ಬದಲಾವಣೆ ತರುವ ಒಂದು ಸೇವಾ ಮನೋಭಾವದ ಪಯಣ ಎಂದು ಮಹಾರಾಷ್ಟ್ರದ ಹಿಂದುಳಿದ ವರ್ಗಗಳ ಆಯೋಗದ ಕಾರ್ಯದರ್ಶಿಗಳು ಹಾಗೂ ಸಮಾಜ ವಿಜ್ಞಾನಿ ಪ್ರೊ. ಅಂಬಾದಾಸ್ ವೈ. ಮೋಹಿತೆ ಅವರು ಹೇಳಿದರು.

ತುಮಕೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗವು, ಭಾರತೀಯ ವೃತ್ತಿಪರ ಸಮಾಜ ಕಾರ್ಯಕರ್ತರ ಸಂಘದ ಸಹಯೋಗದೊಂದಿಗೆ ಎರಡು ದಿನಗಳ ರಾಷ್ಟ್ರಮಟ್ಟದ ಸಮಾಜ ಕಾರ್ಯ ವಿದ್ಯಾರ್ಥಿಗಳ ಹಬ್ಬ ಸ್ವರಂಗ್-2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಾಜಕಾರ್ಯ ವಿದ್ಯಾರ್ಥಿಗೆ ಇರಬೇಕಾದ ಮೊದಲ ಮತ್ತು ಪ್ರಮುಖ ಗುಣವೆಂದರೆ ಸಹಾನುಭೂತಿ. ಎದುರಿಗಿರುವ ವ್ಯಕ್ತಿಯ ನೋವನ್ನು ಅವರ ಸ್ಥಾನದಲ್ಲಿ ನಿಂತು ಅರ್ಥಮಾಡಿಕೊಳ್ಳುವ ಶಕ್ತಿ ಇರಬೇಕು. ಕೇವಲ ಕನಿಕರ ತೋರಿಸುವುದಕ್ಕಿಂತ ಹೆಚ್ಚಾಗಿ, ಅವರ ಸಮಸ್ಯೆಗಳಿಗೆ ಸ್ಪಂದಿಸುವ ಸಂವೇದನಾಶೀಲತೆ ಮುಖ್ಯ. ಎದುರಿಗಿರುವವರು ಹೇಳುವುದನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುವುದು. ಸಮಾಜಕಾರ್ಯದ ವೃತ್ತಿಪರ ನೈತಿಕತೆಯನ್ನು ಪಾಲಿಸುವುದು ಅತಿ ಮುಖ್ಯ. ಫಲಾನುಭವಿಗಳ ವೈಯಕ್ತಿಕ ಮಾಹಿತಿ ಮತ್ತು ರಹಸ್ಯಗಳನ್ನು ಕಾಪಾಡುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಯಾವುದೇ ತಾರತಮ್ಯವಿಲ್ಲದೆ (ಜಾತಿ, ಧರ್ಮ, ಲಿಂಗ) ಎಲ್ಲರನ್ನೂ ಸಮಾನವಾಗಿ ಕಾಣುವ ಗುಣವಿರಬೇಕು ಎಂದರು.

ಮುಖ್ಯ ಅತಿಥಿಯಾಗಿ ತುಮಕೂರು ವಿವಿಯ ಮಾಜಿ ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಮಾತನಾಡಿ ಸಮಾಜಕಾರ್ಯದ ವೃತ್ತಿಪರ ನೈತಿಕತೆಯನ್ನು ಪಾಲಿಸುವುದು ಅತಿ ಮುಖ್ಯ. ಫಲಾನುಭವಿಗಳ ವೈಯಕ್ತಿಕ ಮಾಹಿತಿ ಮತ್ತು ರಹಸ್ಯಗಳನ್ನು ಕಾಪಾಡುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಯಾವುದೇ



ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ ರಾಷ್ಟ್ರಮಟ್ಟದ ಸಮಾಜ ಕಾರ್ಯ ವಿದ್ಯಾರ್ಥಿಗಳ ಹಬ್ಬ ಸ್ವರಂಗ್-2026ನ್ನು ಮಹಾರಾಷ್ಟ್ರದ ಹಿಂದುಳಿದ ವರ್ಗಗಳ ಆಯೋಗದ ಕಾರ್ಯದರ್ಶಿ ಹಾಗೂ ಸಮಾಜ ವಿಜ್ಞಾನಿ ಪ್ರೊ. ಅಂಬಾದಾಸ್ ವೈ. ಮೋಹಿತೆ ಉದ್ಘಾಟಿಸಿದರು.

ತಾರತಮ್ಯವಿಲ್ಲದೆ (ಜಾತಿ, ಧರ್ಮ, ಲಿಂಗ) ಎಲ್ಲರನ್ನೂ ಸಮಾನವಾಗಿ ಕಾಣುವ ಗುಣವಿರಬೇಕು. ಸಾಮಾಜಿಕ ಬದಲಾವಣೆ ಎಂಬುದು ರಾತ್ರೋರಾತ್ರಿ ಸಂಭವಿಸುವುದಿಲ್ಲ. ಸವಾಲುಗಳು ಎದುರಾದಾಗ ಧೃತಿಗೆಡದೆ, ಸತತ ಪ್ರಯತ್ನ ಮತ್ತು ತಾಳ್ಮೆಯಿಂದ ಕೆಲಸ ಮಾಡುವ ಮನೋಭಾವ ಇರಬೇಕು ಎಂದರು.

ನಿಮ್ಹಾನ್ಸ್ ಮನೋವೈದ್ಯಕೀಯ ಸಮಾಜ ಕಾರ್ಯ ವಿಭಾಗದ ಮಾಜಿ ಮುಖ್ಯಸ್ಥರು, ಐ ಎಸ್ ಪಿ ಎಸ್ ಡಬ್ಲ್ಯೂ ನ ಶಾಶ್ವತ ಸಲಹೆಗರ ಪ್ರೊ. ಐ. ಎ. ಶರೀಫ್ ಮಾತನಾಡಿ ಸಮಾಜದ ದುರ್ಬಲ ವರ್ಗದವರಿಗೆ ನ್ಯಾಯ ಕೊಡಿಸಲು ಭಾರತೀಯ ಸಂವಿಧಾನದ ಮೂಲಭೂತ ಹಕ್ಕುಗಳು, ಮಹಿಳಾ ಮತ್ತು ಮಕ್ಕಳ ರಕ್ಷಣಾ ಕಾಯ್ದೆಗಳು ಹಾಗೂ ಮಾನವ ಹಕ್ಕುಗಳ ಬಗ್ಗೆ ಕನಿಷ್ಠ ಜ್ಞಾನವಿರಬೇಕು. ಇಂದಿನ ಕಾಲದಲ್ಲಿ ಸಾಮಾಜಿಕ ಬದಲಾವಣೆ ತರಲು ತಂತ್ರಜ್ಞಾನದ ಅರಿವು ಮುಖ್ಯ ಎಂದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್ ಬಿ.ಮಾತನಾಡಿ ಸೇವೆ ಮಾಡುತ್ತ ಮಾಡುತ್ತ ನಮ್ಮ ನಾವು ತೊಡಗಿಸಬೇಕು. ಕಾರ್ಪೊರೆಟ್ ನಲ್ಲಿ ಗುರುತಿಸುವಿಕೆ ಜೊತೆಗೆ ಸೇವೆಯಲ್ಲೂ ತೊಗಡಿಸಿಕೊಳ್ಳುವುದು ಅಗತ್ಯ.ಸಮಾಜ ಕಾರ್ಯ ವಿದ್ಯಾರ್ಥಿಗಳನ್ನು ಶಿಸ್ತು, ವರ್ತನೆ, ನಡೆಯಿಂದ ಗುರುತಿಸಬಹುದು ಎಂದರು.

ಸಿಂಡಿಕೇಟ್ ಸದಸ್ಯರಾದ ಡಾ. ಮನೋಜ್ ಎಚ್. ಆರ್. ಮಾತನಾಡಿ ಪ್ರತಿದಿನ ಹೊಸ ಹೊಸ ವ್ಯಕ್ತಿಗಳನ್ನು ಭೇಟಿಯಾಗುವುದರಿಂದ, ಮನುಷ್ಯರ ಭಾವನೆಗಳು, ವರ್ತನೆಗಳು ಮತ್ತು ಅವರ ಪ್ರತಿಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ ಕಲಿಕೆ ಸಿಗುತ್ತದೆ. ಒಂದು ಸಣ್ಣ ಸನ್ನಿವೇಶದಲ್ಲಿ ಜನರು ಹೇಗೆ ವರ್ತಿಸುತ್ತಾರೆ ಎಂಬುದನ್ನು ಗಮನಿಸುವುದು ಇವರಿಗೆ ದೊಡ್ಡ ಪಾಠ.ಒಂದು ಸಮಸ್ಯೆ ಮೇಲ್ನೋಟಕ್ಕೆ ಕಾಣುವುದಕ್ಕಿಂತ ಭಿನ್ನವಾಗಿರಬಹುದು. ಅದರ ಮೂಲ ಕಾರಣವನ್ನು ಹುಡುಕುವುದು ಇವರ ದೈನಂದಿನ ಕಲಿಕೆ ಎಂದರು.

ತುಮಕೂರು ವಿವಿ ಕುಲಸಚಿವರಾದ ನಾಹಿದಾ ಜಮ್ ಜಮ್ ಮಾತನಾಡಿ ಸಮಾಜಕಾರ್ಯ ವಿದ್ಯಾರ್ಥಿಗಳಿಗೆ ಇಡೀ ಸಮಾಜವೇ ಒಂದು ತೆರೆದ ವಿಶ್ವವಿದ್ಯಾಲಯ. ಅವರು ಅನುಭವದ ಮೂಲಕ ಪಡೆಯುವ ಶಿಕ್ಷಣಕ್ಕೆ ಬೆಲೆ ಕಟ್ಟಲಾಗದು. ಸೀಮಿತ ಸಂಪನ್ಮೂಲಗಳಲ್ಲಿ ಜನರಿಗೆ ಹೇಗೆ ಉತ್ತಮ ಸಹಾಯ ಮಾಡಬಹುದು ಎಂಬ ಸಂಕುಚಿತ ಸಂಪನ್ಮೂಲ ನಿರ್ವಹಣೆಯನ್ನು ಇವರು ಕಲಿಯುತ್ತಾರೆ ಎಂದರು. ಕಲಾ ನಿಕಾಯದ ಡೀನ್ ಹಾಗೂ ಸಮಾಜ ಕಾರ್ಯ ವಿಭಾಗದ ಅಧ್ಯಕ್ಷರಾದ ಪ್ರೊ. ಪರಶುರಾಮ ಕೆ. ಜಿ. ಅವರು ಸ್ವಾಗತಿಸಿದರೆ, ಡಾ. ಆರ್. ಧನಶೇಖರ ಪಾಂಡಿಯನ್ ವಂದಿಸಿದರು.

ಆಂಧ್ರದಿಂದ ನೀರು ಬಿಡಿಸಲು ಎಚ್‌ಡಿಕೆಗೆ ಮಾಜಿ ಶಾಸಕ ಮನವಿ



ಆಂಧ್ರದ ಅಂದ್ರಿ ನಿವಾ ಯೋಜನೆ ಅಡಿ ಪಾವಗಡ ತಾಲೂಕಿನ ನಾಗಲಮಡಿಕೆ ಬ್ಯಾರೇಜಿಗೆ ನೀರು ಹರಿಸುವಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ಮಾಜಿ ಶಾಸಕ ಕೆ. ಎಂ.ತಿಮ್ಮರಾಯಪ್ಪ ಮನವಿ ಪತ್ರ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ ಪಾವಗಡ**

ಕುಡಿಯುವ ನೀರಿನ ಅಭಾವದ ಹಿನ್ನಲೆಯಲ್ಲಿ ಆಂಧ್ರದ ಸಿಎಂ ಚಂದ್ರಬಾಬುನಾಯ್ಡು ಅವರ ಜತೆ ಚರ್ಚಿಸಿ, ಅಂದ್ರಿನಿವಾ ಯೋಜನೆ ಅಡಿ ಗೊಲ್ಲಪಲ್ಲಿ ರಿರ್ಜವಾಯರ್‌ನಿಂದ ತಾಲೂಕಿನ ನಾಗಲಮಡಿಕೆ ಬ್ಯಾರೇಜಿಗೆ ನೀರನ್ನು ಬಿಡಿಸಿ ಈ ಭಾಗದ ರೈತ ಹಾಗೂ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸುವಂತೆ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಶುಕ್ರವಾರ ಪಾವಗಡದ ಮಾಜಿ ಶಾಸಕ ಕೆ. ಎಂ.ತಿಮ್ಮರಾಯಪ್ಪ ಮನವಿ ಪತ್ರ ಸಲ್ಲಿಸಿದರು.

ಈಗಲೂ ಸಹ ಪಾವಗಡ ತಾಲೂಕು,ಆಂಧ್ರಪ್ರದೇಶ ಸುತ್ತುವರೆದಿದ್ದು ಅತೀ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ಇಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗಿರುವ ಪ್ರಯುಕ್ತ ಅಂದ್ರಿನಿವ ಯೋಜನೆ ಅಡಿಯಲ್ಲಿ ಆಂಧ್ರಪ್ರದೇಶದ ಗೊಲ್ಲಪಲ್ಲಿ ರಿರ್ಜವಾಯರ್‌ನಿಂದ ಪೆದ್ದಕೋಡಿಪಲ್ಲಿ ಮಾರ್ಗವಾಗಿ ತಾಲೂಕಿನ ನಾಗಲಮಡಿಕೆಯ ಉತ್ತರ ಪಿನಾಕಿನಿಯ ಬ್ಯಾರೇಜಿಗೆ ನೀರನ್ನು ಬಿಡುವ ಮುಖೇನಾ ಅನುಕೂಲ ಕಲ್ಪಿಸುವಂತೆ ಒತ್ತಾಯಿಸಿದ್ದಾರೆ. ತಾಲೂಕಿನ ಈ ಗ್ರಾಮಗಳಿಗೆ 0.38 ಟಿ.ಎಂ.ಸಿ. ನೀರನ್ನು ಸರಬರಾಜು ಮಾಡಿಸಿಕೊಡಬೇಕಾಗಿ ತಾಲೂಕಿನ ಜನತೆಯ ಪರವಾಗಿ ಅವರು ಮನವಿಯನ್ನು ಸಲ್ಲಿಸಿದ್ದಾರೆ. ಇದಕ್ಕೆ ಸ್ಪಂದಿಸಿದ ಕೇಂದ್ರ ಸಚಿವರು ಅಲ್ಲಿನ ಸಿಎಂ ಹಾಗೂ ಸರ್ಕಾರದ ಜತೆ ಚರ್ಚಿಸಿ ಸಮಸ್ಯೆ ನಿವಾರಣೆಗೆ ಬದ್ದರಿರುವುದಾಗಿ ತಿಳಿಸಿದ್ದಾರೆ.

ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಭಾಗವಹಿಸಿ: ಲೋಕೇಶ್ವರ

ತಿಪಟೂರು: ಕಲ್ಪತರುನಾಡು ತಿಪಟೂರಿಗೂ ಮಾಜಿ ಮುಖ್ಯಮಂತ್ರಿಗಳಾದ ಬಿಎಸ್ ಯಡಿಯೂರಪ್ಪನವರಿಗೂ ಕಳೆದ 50 ವರ್ಷಗಳಿಗೂ ಹೆಚ್ಚು ಕಾಲದಿಂದ ಅವಿನಾಭಾವ ಸಂಬಂಧವಿದ್ದು ಚಿತ್ರದುರ್ಗದಲ್ಲಿ ನಡೆಯುವ ಇಂದಿನ ಅವರ ಅಭಿಮಾನೋತ್ಸವಕ್ಕೆ ತಿಪಟೂರು ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸುವ ಮೂಲಕ ಸಮಾರಂಭವನ್ನು ಯಶಸ್ವಿಗೊಳಿಸೋಣ ಎಂದು ಬಿಜೆಪಿ ಮುಖಂಡರಾದ ಲೋಕೇಶ್ವರ ಕರೆ ನೀಡಿದ್ದಾರೆ. ಅವರು ಈ ಸಂಬಂಧ ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ಯಡಿಯೂರಪ್ಪನವರ ರಾಜಕೀಯ ಜೀವನದಲ್ಲಿ ಕಲ್ಪತರು ನಾಡು ತಿಪಟೂರಿಗೆ ವಿಶೇಷ ಒತ್ತು ನೀಡಿ ಕಲ್ಪತರು ನಾಡಿನ ಅಭಿವೃದ್ಧಿಗೆ ವಿಶೇಷ ಕೊಡಿಗೆ ನೀಡಿದ್ದಾರೆ. ತಾಲೂಕಿನ ನೀರಾವರಿ, ವಿದ್ಯುತ್, ಶೈಕ್ಷಣಿಕ, ಆರೋಗ್ಯ ಹಾಗೂ ಎಲ್ಲಾ ರೀತಿಯ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಸಾವಿರಾರು ಕೋಟಿ ಹಣ ನೀಡಿ ಕಾರಣಕರ್ತರಾಗಿದ್ದಾರೆ. ಅವರ ಸರಳತೆಯಿಂದ ಸಾಕಷ್ಟು ರಾಜಕೀಯ ನಾಯಕರುಗಳು ಹುಟ್ಟಿಕೊಂಡು ಬೆಳೆದಿದ್ದಾರೆ, ಬೆಳೆಸಿದ್ದಾರೆ. ಈಗ ಅವರು ರಾಜಕೀಯ ಪಾದಾರ್ಪಣೆ ಜೀವನಕ್ಕೆ, ಸಮಾಜ ಸೇವೆಗೆ ಅವರನ್ನ ಅರ್ಪಿಸಿಕೊಂಡು ಸುದೀರ್ಘ 50 ವರ್ಷಗಳೇ ಕಳೆದಿವೆ.

ಹಾಗಾಗಿ ಅವರ ಅಭಿಮಾನಿಗಳು ಬಿಎಸ್ ವೈ ಅಭಿಮಾನೋತ್ಸವವನ್ನು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ತಿಪಟೂರಿನಿಂದ 20 ಸಾವಿರಕ್ಕೂ ಹೆಚ್ಚಿನ ಬಿಜೆಪಿ ಕಾರ್ಯಕರ್ತರುಗಳು ಹಾಗೂ ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದ್ದಾರೆ.

ಸುದ್ದಿ ಸಿಂಚನ

ವೈದೇಹಿ ಚೌಧರಿ, ಝೀಲ್ ದೇಸಾಯಿ ಸೆಮಿಫೈನಲ್‌ಗೆ

ತುಮಕೂರು: ಜಿಲ್ಲಾ ಟೆನಿಸ್ ಕೋರ್ಟ್ ನಲ್ಲಿ ಶುಕ್ರವಾರ ನಡೆದ ಮೂರು ಸೆಟ್‌ಗಳ ಕಠಿಣ ಹೋರಾಟದ ನಂತರ ಭಾರತದ ತಾರೆಗಳಾದ ವೈದೇಹೀ ಚೌಧರಿ ಮತ್ತು ಝೀಲ್ ದೇಸಾಯಿ ತುಮಕೂರು ಓಪನ್ ಐಟಿಎಫ್ ಡಬ್ಲ್ಯೂ 35 ರ ಸಿಂಗಲ್ಸ್ ಸೆಮಿಫೈಲ್ಸ್‌ಗೆ ಮುನ್ನಡೆಯುವ ಮೂಲಕ ತವರಿನ ಸವಾಲನ್ನು ಜೀವಂತವಾಗಿರಿಸಿದರು.ಅಗ್ರ ಶ್ರೇಯಾಂಕಿತ ಜಸ್ಟಿನಾ ಮಿಕುಲ್‌ಸ್ಕೈಟ್ ಮತ್ತು ಎರಡನೇ ಶ್ರೇಯಾಂಕಿತ ಜುಝುನ್ನಾ ಪಾವ್ಲಿಕೋವ್‌ಸ್ಕಾ ಕೂಡ ಕಠಿಣ ಪರೀಕ್ಷೆಗಳಿಂದ ಪಾರಾಗಿ ಉತ್ತಮ ಗುಣಮಟ್ಟದ ಸೆಮಿಫೈನಲ್ ಲೈನ್‌ಅಪ್ ಅನ್ನು ಪೂರ್ಣಗೊಳಿಸಿದರು. ಡಬಲ್ಸ್ ವಿಭಾಗದಲ್ಲಿ, ವೈದೇಹಿ ಮತ್ತು ಪಾವ್ಲಿಕೋವ್‌ಸ್ಕಾ ಪ್ರಬಲ ರೀತಿಯಲ್ಲಿ ಫೈನಲ್‌ಗೆ ಲಗ್ಗೆ ಹಾಕಿದರು. ಹಾಗೆಯೇ ಕ್ಸೆನಿಯಾ ಲಸ್ಕುಟೋವಾ ಮತ್ತು ಎಲಿನಾ ನೆಪ್ಲಿಜೋಡಿ ಸಹ ಪ್ರಶಸ್ತಿ ಸುತ್ತಿಗೆ ತಮ್ಮ ಸ್ಥಾನವನ್ನು ಖಚಿತಪಡಿಸಿಕೊಂಡಿತು.ವೈದೇಹಿ ಶನಿವಾರ ಮೊದಲ ಸೆಮಿಫೈನಲ್‌ನಲ್ಲಿ ಜಸ್ಟಿನಾ ಜೊತೆ ಸೆಣಸಾಡಲಿದ್ದಾರೆ ಮತ್ತು ಝೀಲ್ ಎರಡನೇ ಸೆಮಿಫೈನಲ್‌ನಲ್ಲಿ ಪಾವ್ಲಿಕೋವ್‌ಸ್ಕಾ ಅವರ ಸವಾಲು ಎದುರಿಸಲಿದ್ದಾರೆ. ಮೂರನೇ ಶ್ರೇಯಾಂಕಿತ ವೈದೇಹಿ ಎರಡು ಗಂಟೆ 40 ನಿಮಿಷಗಳ ಕಾಲ ನಡೆದ ರೋಮಾಂಚಕಾರಿ ಹಣಾಹಣಿಯಲ್ಲಿಆರನೇ ಶ್ರೇಯಾಂಕಿತ ಎಕಟೆರಿನಾ ಯಾಶಿನಾ ಅವರನ್ನು 6-4, 6-3 (5), 7-5 ಸೆಟ್ ಗಳಿಂದ ಸೋಲಿಸಿದರು. ನಾಲ್ಕನೇ ಶ್ರೇಯಾಂಕ ಆಟಗರ್ತಿ ಜೀಲ್ ದೇಸಾಯಿ ಎರಡು ಗಂಟೆ 52 ನಿಮಿಷಗಳ ಕಾಲ ನಡೆದ ಮ್ಯಾರಥಾನ್ ಆಟದಲ್ಲಿ ಅರಿನಾ ಅರಿಫುಲ್ಲಿನಾ ವಿರುದ್ಧ 4-6, 6-3, 7-5 ಅಂತರದ ನಾಟಕೀಯ ಜಯದೊಂದಿಗೆ ಹೊರಬಂದರು.ಝೀಲ್ ಆರಂಭದಲ್ಲಿ ಆರಂಭಿಕ ಸೆಟ್‌ನ ಏಳನೇ ಗೇಮ್‌ನಲ್ಲಿ ಮುರಿದರು, ಆದರೆ ಅರಿಫುಲ್ಲಿನಾ ಎಂಟನೇ ಮತ್ತು 10ನೇ ಗೇಮ್ ಗಳಲ್ಲಿವಿರಾಮಗಳೊಂದಿಗೆ ಬಲವಾಗಿ ಪ್ರತಿಕ್ರಿಯಿಸಿ ಸೆಟ್‌ಅನ್ನು ವಶಪಡಿಸಿಕೊಂಡರು. ಎರಡನೇ ಸೆಟ್ ರೋಲರ್ ಕೋಸ್ಟರ್ ಆಗಿ ಮಾರ್ಪಟ್ಟಿತ್ತು. ಇಬ್ಬರೂ ಆಟಗಾರ್ತಿಯರೂ ಪದೇ ಪದೇ ಬ್ರೇಕ್ ಪಾಯಿಂಟ್ ಗಳಲ್ಲಿ ಮಿಂಚಿದರಾದರೂ ಭಾರತೀಯ ಆಟಗಾರ್ತಿ ಒಂಬತ್ತನೇ ಗೇಮ್‌ನಲ್ಲಿ ತನ್ನ ಸೆಟ್‌ಅನ್ನು ಗೆದ್ದುಕೊಂಡರು.

11ರಂದು ಬುದ್ಧ ಜಯಂತಿ, ಭೀಮೋತ್ಸವ: ತಿಪ್ಪೇಸ್ವಾಮಿ

ಶಿರಾ: ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ 11ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಬುದ್ಧ ಜಯಂತಿ ಹಾಗೂ ಭೀಮೋತ್ಸವ ಕಾರ್ಯಕ್ರಮವನ್ನು ನಗರದ ಶ್ರೀ ವಿವೇಕಾನಂದ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ದಸಂಸ ತಾಲೂಕು ಅಧ್ಯಕ್ಷ ಶಿವಾಜಿನಗರ ತಿಪ್ಪೇಸ್ವಾಮಿ ಹೇಳಿದರು. ಶುಕ್ರವಾರ ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ ಭಗವಾನ್ ಬುದ್ಧರ ಜಯಂತಿ ಪ್ರಯುಕ್ತ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಅವರ ಹುಟ್ಟುಹಬ್ಬದ ಪ್ರಯುಕ್ತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಭಂತೇಜಿ ಧಮ್ಮವೀರ ವಹಿಸುವರು, ಬಿಎಸ್ಪಿ ರಾಜ್ಯ ಉಸ್ತುವಾರಿಗಳಾದ ಹ.ರಾ.ಮಹೇಶ್ ಹಾಗೂ ಚಿಂತಕರಾದ ಡಾ.ರವಿಕುಮಾರ್‌ನೀಹ ಕಾರ್ಯಕ್ರಮ ಉದ್ಘಾಟಿಸುವರು. ದಸಂಸ ಜಿಲ್ಲಾಧ್ಯಕ್ಷ ಟೈರ್ ರಂಗನಾಥ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಜು.ಆರ್.ಆರ್., ಬಿ.ರಾಮಚಂದ್ರಪ್ಪ, ಎ.ನರಸಿಂಹಮೂರ್ತಿ, ಕೋದಂಡರಾಮ ಅವರು ಭಾಗವಹಿಸುವರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರಿಗೆ ಸನ್ಮಾನಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ತಾಲೂಕಿನ ಜನತೆ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು. ಹಿರಿಯ ದಲಿತ ಮುಖಂಡ ಬೀರನಹಳ್ಳಿ ಹನುಮಂತಪ್ಪ ಮಾತನಾಡಿ ಈ ಕಾರ್ಯಕ್ರಮಕ್ಕೆ ಎಲ್ಲಾ ಜನತೆ ಪಕ್ಷಾತೀತವಾಗಿ, ಜ್ಯಾತ್ಯತೀತವಾಗಿ ಭಾಗವಹಿಸಿ ಯಶಸ್ವಿಗೊಳಿಸಿ ಎಂದರು. ದಸಂಸ ನಗರ ಅಧ್ಯಕ್ಷ ನಿತಿನ್ ತಿಪ್ಪೇಶ್ ಮಾತನಾಡಿ ಶಾಂತಿ ಮತ್ತು ಅಹಿಂಸೆಯನ್ನು ಸಾರಿದ ಬುದ್ಧನ ಹಾಗೂ ಜಗತ್ತಿನಲ್ಲಿಯೇ ಅತಿ ದೊಡ್ಡ ಸಂವಿಧಾನವನ್ನು ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮ ವಿಶೇಷವಾಗಿ ನಡೆಯಲಿದೆ. ಇಂದಿನಿ ದಿನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ದಲಿತರ ಮೇಲಿನ ಶೋಷಣೆಗಳು ಹೆಚ್ಚಿದ್ದು ಅದನ್ನು ನಮ್ಮಸಮುದಾಯದ ಯುವಕರು ತಡೆಯಲು ತಯಾರಾಗಬೇಕಿದೆ. ಮುಂದಿನ ಪೀಳಿಗೆಗೆ ಅಂಬೇಡ್ಕರ್ ಕೊಡುಗೆಗಳನ್ನು ಸಹ ನಾವು ಹೇಳಬೇಕಿದೆ. ಅಂದಾಗ ಇಂತಹ ಕಾರ್ಯಕ್ರಮಗಳಿಗೆ ಅರ್ಥ ಬರುತ್ತದೆ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು, ಮಹಿಳೆಯರು, ಸಾರ್ವಜನಿಕರು ಭಾಗವಹಿಸಿ ಎಂದರು. ಪತ್ರಿಕಾಗೋಷ್ಠಿಯಲ್ಲಿ ದಸಸಂಸ ಸಂಘಟನಾ ಸಂಚಾಲಕ ಶ್ರೀರಂಗಪ್ಪ, ಚನ್ನನಕುಂಟೆ ರಂಗನಾಥ್, ಕಳ್ಳಂಬೆಳ್ಳ ಹೋಬಳಿ ಅಧ್ಯಕ್ಷ ದಿನೇಶ್, ಗೌಡಗೆರೆ ಹೋಬಳಿ ಅಧ್ಯಕ್ಷ ನವೀನ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಲಾವಣ್ಯ, ನಗರ ಅಧ್ಯಕ್ಷೆ ಭಾಗ್ಯಮ್ಮ, ಸಂಘಟನಾ ಸಂಚಾಲಕಿ ಜ್ಯೋತಿ, ಶಿರಾ ನಗರ ಪ್ರಧಾನ ಕಾರ್ಯದರ್ಶಿ ಕಾರ್ತಿಕ್, ತಿಪ್ಪೇಶ್ ಕೆ.ಕೆ., ಖಜಾಂಚಿ ಜಯರಾಜ್, ರಂಗನಾಥ್ ಮೌರ್ಯ ಸೇರಿದಂತೆ ಹಲವರು ಹಾಜರಿದ್ದರು.

ಖಾಸಗಿ ಶಾಲೆ ಪರವಾನಗಿ ರದ್ದು ಮಾಡಿ: ಹನುಮಂತರಾಯಪ್ಪ

ಪಾವಗಡ: ತಾಲೂಕಿನ ದೊಮ್ಮತಮರಿ ಗ್ರಾಮದ ಅಕ್ಷರ ನಿಧಿ ಕಿರಿಯ ಪ್ರಾಥಮಿಕ ಶಾಲೆ ಮತ್ತು ಶ್ರೀ ಮೈಲಾರಲಿಂಗೇಶ್ವರಸ್ವಾಮಿ ಸರಸ್ವತಿ ಕಿರಿಯ ಪ್ರಾಥಮಿಕ ಶಾಲೆಗಳ ನೋಂದಣಿ ರದ್ದುಪಡಿಸಿ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿ ಎಂದು ನಿವೃತ್ತ ಮುಖ್ಯ ಶಿಕ್ಷಕ ಹಾಗೂ ತಾಲೂಕು ಬಿಜೆಪಿ ದಲಿತ ಮುಖಂಡರಾದ ದೊಮ್ಮತಮರಿ ಎಚ್.ಹನುಮಂತರಾಯಪ್ಪ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಶಾಲೆಗಳಲ್ಲಿ ಸರ್ಕಾರದ ನಿಯಮನುಸಾರ ತರಬೇತಿ ಪಡೆದ ಶಿಕ್ಷಕರ ಕೊರತೆ ಮತ್ತು ಮೂಲಸೌಕರ್ಯ ಹಾಗೂ ಮಕ್ಕಳಿಗೆ ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಉತ್ತಮ ವಾತಾವರಣ ಹಾಗೂ ಸರಿಯಾದ ಪಾಠಪ್ರವಚನ ಮಕ್ಕಳಿಗೆ ಸಿಕ್ಕುತ್ತಿಲ್ಲ. ಹೀಗಾಗಿ ತನಿಖೆ ನಡೆಸಿ ಶಾಲೆಗಳ ಪರವಾನಗಿ ರದ್ದು ಪಡಿಸುವ ಮೂಲಕ ಗ್ರಾಮೀಣ ಮಕ್ಕಳ ಉತ್ತಮ ಶೈಕ್ಷಣಿಕ ಪ್ರಗತಿಗೆ ಸಹಕರಿಸುವಂತೆ ಒತ್ತಾಯಿಸಿದರು.

ಕಳೆದ 10ವರ್ಷದ ಹಿಂದೆ ಅಕ್ಷರ ನಿಧಿ ಮತ್ತು ಶ್ರೀ ಮೈಲಾರಲಿಂಗೇಶ್ವರಸ್ವಾಮಿ ಸರಸ್ವತಿ ಕಾನ್ವೆಂಟ್ ತೆರೆದು ಎಲ್‌ಕೆಜಿಯಿಂದ 5ನೇ ತರಗತಿಯ ವರೆವಿಗೂ ತರಗತಿ ನಡೆಸಲಾಗುತ್ತಿದೆ.ತಲಾ ಒಂದೊಂದು ಶಾಲೆಯಲ್ಲಿ ನೂರುನೂರು ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ದ್ಯಾರ್ಥಿಗಳಿಗೆ ಅನುಗುಣವಾಗಿ ತರಗತಿ ಸೌಲಭ್ಯವಿಲ್ಲ. ಶೌಚಾಲಯಗಳಿಲ್ಲ,ಮುಖ್ಯವಾಗಿ ಆಟದ ಮೈದಾನವಿಲ್ಲ ಶಾಲಾ ಕೊಠಡಿಗಳಿಗೆ ಸರಿಯಾದ ಕಿಟಕಿ ಬಾಗಿಲುಗಳಿಲ್ಲ,ಸರಿಯಾದ ಪರಿಸರವಿಲ್ಲ. ಇಂತಹ ಪರಿಸ್ಥಿಯಲ್ಲಿ ಗ್ರಾಮೀಣ ಮಕ್ಕಳು ಶೈಕ್ಷಣಿಕ ಪ್ರಗತಿ ಕಾಣಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಡಿಎಂಕೆ-ಎಐಎಡಿಎಂಕೆ ಸರ್ಕಾರ ಮಾಡೋ ನಂಬಿಕೆಯಿಲ್ಲ

ಮಾವಿನಕೆರೆಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ | ತಮಿಳುನಾಡಿನ ಉಚಿತಗಳ ಸರಮಾಲೆ: ದೇವರೇ ಕಾಪಾಡಬೇಕು

• **ಕನ್ನಡಪ್ರಭ ವಾರ್ತೆ** ಹೊಳೆನರಸೀಪುರ

ಕೆಲವೊಂದು ಸಂದರ್ಭದಲ್ಲಿ ಸರ್ಕಾರ ರಚನೆ ವಿಚಾರದಲ್ಲಿ ಆಯಾ ರಾಜ್ಯದ ರಾಜ್ಯಪಾಲರು ಅವರದ್ದೇ ಆದ ಕಾನೂನು ಪಂಡಿತರ ಸಲಹೆ ಮೇರೆಗೆ ನಿರ್ಧಾರವನ್ನು ತೆಗೆದುಕೊಂಡಿದ್ದನ್ನು ಕಂಡಿದ್ದೇವೆ. ಅವರು ಸ್ಪಷ್ಟ ಬಹುಮತದ ಸಂಖ್ಯೆ ಸ್ಪಷ್ಟಪಡಿಸಿ ಎಂದಿದ್ದಾರೆ. ಡಿಎಂಕೆ -ಎಐಎಡಿಎಂಕೆ ಎರಡು ಪಕ್ಷಗಳು ಸೇರಿ ಸರ್ಕಾರ ಮಾಡುವುದನ್ನು ನಾನಂತೂ ನಿರೀಕ್ಷೆ ಮಾಡಲ್ಲ. ಅದೆಲ್ಲಾ ಊಹಾಪೋಹ ಎಂದು ಕೇಂದ್ರ ಸಚಿವ ಎಚ್. ಡಿ.ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ಹಳೇಕೋಟೆಯ ಬೆಟ್ಟದ ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ ಶುಕ್ರವಾರ ಪೂಜೆ ಸಲ್ಲಿಸಿ ಮಾತನಾಡಿದರು. ವಿಜಯ್ ಅವರು ಸಹ ಬಹುಮತ ಸಾಬೀತುಪಡಿಸಲು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಎರಡು ದಿನದಲ್ಲಿ ಅಸ್ಪಷ್ಟತೆ ಸರಿಪಡಿಸುವ ಸಾಧ್ಯತೆ ಇದೆ. ಜತೆಗೆ ಸ್ಟಾಲಿನ್ ಅವರು ಆರು ತಿಂಗಳು ಸರ್ಕಾರ ನಡೆಸಲಿ ತೊಂದರೆ ಕೊಡಲ್ಲ ಎಂದಿದ್ದಾರೆ. ಟಿವಿಕೆಗೆ ಕಾಂಗ್ರೆಸ್ ಬೆಂಬಲ ಕುರಿತು ಮಾತನಾಡಿ, ಕಾಂಗ್ರೆಸ್ ಪಕ್ಷದ ನಡವಳಿಕೆ ಬಗ್ಗೆ ಸಾಕಷ್ಟು ಕಂಡಿದ್ದೇವೆ, ಕಾಂಗ್ರೆಸ್ ಪಕ್ಷ ಯಾವ್ಯಾವ ಸಂದರ್ಭದಲ್ಲಿ, ಯಾವ್ಯಾವ್ಯ ರೀತಿ ಸರ್ಕಾರಗಳನ್ನು ಅಸ್ಥಿರಗೊಳಿಸಿದ್ದಾರೆ. ಕೇಂದ್ರದಲ್ಲಿದ್ದಂತಹ ಚರಣ್ ಸಿಂಗ್ ಅವರಿಂದ ಪ್ರಾರಂಭವಾಗಿ ವಿಪಿ ಸಿಂಗ್, ಚಂದ್ರಶೇಖರ್, ಅದೇ ರೀತಿ ದೇವೇಗೌಡರು ಅಧಿಕಾರದಲ್ಲಿದ್ದಾಗ ಯಾವ ಕಾರಣಗಳನ್ನು ಕೊಟ್ಟು ಸರ್ಕಾರ ತೆಗೆದರು. ಕಾಂಗ್ರೆಸ್‌ನಲ್ಲಿ ಅವರಿಗೆ ಬೇಕಾದ ರೀತಿಯಲ್ಲಿ ತೀರ್ಮಾನ ಮಾಡುವ ಹಲವಾರು ಉದಾಹರಣೆಗಳನ್ನು ಕೊಡಬಹುದು. ಇವತ್ತು ಡಿಎಂಕೆ ಜೊತೆ ಇಪ್ಪತ್ತು ವರ್ಷದ ಸಂಬಂಧ ಕಡಿದು ವಿಜಯ್ ಅವರ ಜೊತೆ ಸೇರಿದ್ದಾರೆ. ಅವರ ಪಕ್ಷದ ಮುಂದಿನ ಭವಿಷ್ಯದ ದೃಷ್ಟಿಯಿಂದ ತೀರ್ಮಾನ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ನಾನೇಕೆ ಚರ್ಚೆ ಮಾಡಲಿ. ಕಾಲ ಅದಕ್ಕೆ ಉತ್ತರ ಕೊಡುತ್ತದೆ ಎಂದರು.

ಗ್ಯಾರಂಟಿ ನೀಡಲು 6ರಿಂದ 7 ಲಕ್ಷ ಕೋಟಿ ಬೇಕು: ತಮಿಳುನಾಡಿನಲ್ಲಿ ನಾನಂತೂ ನಿರೀಕ್ಷೆ ಮಾಡಿದ್ದೆ, ಒಂದು ತಿಂಗಳ ಹಿಂದೆ ನಮ್ಮ ಸ್ನೇಹಿತರಿಗೆ ಹೇಳಿದ್ದೆ. ಕಳೆದ ಐವತ್ತು ವರ್ಷಗಳಿಂದ ಎರಡು ದ್ರಾವಿಡ ಪಕ್ಷಗಳ ಆಡಳಿತ ಏನೆಂದು ಅಲ್ಲಿಯ ಜನ ನೋಡಿದ್ರು, ಆದ್ದರಿಂದ ಒಂದು ಹೊಸ ವ್ಯವಸ್ಥೆ ತರಲು ಜನಸಾಮಾನ್ಯರು ನಿರ್ಧಾರ ಮಾಡ್ತಾರೆ ಎನ್ನುವ ನಿರೀಕ್ಷೆ ಇಟ್ಟಿದ್ದೆ ಎಂದರು. ತಮಿಳುನಾಡಿನಲ್ಲಿ ಸ್ವಲ್ಪ ಸಿನಿಮಾದ ಪ್ರಭಾವಕ್ಕೆ ಒಳಗಾಗುತ್ತಾರೆ, ಹಲವಾರು ಸಂದರ್ಭದಲ್ಲಿ ನಡೆದಿದೆ, ಈಗಲೂ ನಡೆದಿದೆ. ಒಂದು ಹೊಸ ಮುಖ, ವ್ಯಕ್ತಿ ಅಧಿಕಾರ ಕೊಡಬೇಕು ಎಂದು ಕೊಟ್ಟಿದ್ದಾರೆ. ಉಚಿತ ಗ್ಯಾರಂಟಿಗಳ ಬಗ್ಗೆ ದೇವರು ಕಾಪಾಡಬೇಕು, ವಿಜಯ್ ಅವರಿಗೆ ಯಾರು ಉಚಿತ ಗ್ಯಾರಂಟಿಗಳನ್ನು ಘೋಷಣೆ ಮಾಡಲು ಯಾರು ಪ್ರಭಾವ ಬೀರಿದ್ರೊ, ಗೊತ್ತಿಲ್ಲ, ಅಲ್ಲಿಯ ಬಜೆಟ್ ವರ್ಷಕ್ಕೆ 3.40 ಲಕ್ಷ ಕೋಟಿ ಇದೆ ಮತ್ತು ಅವರ ಉಚಿತ ಗ್ಯಾರಂಟಿಗಳನ್ನು ನೀಡಲು 6 ರಿಂದ 7 ಲಕ್ಷ ಕೋಟಿ ಬೇಕು ಎಂದು ತಿಳಿಸಿ, ಅದ್ಯಾವ ತರ ಹಣ ಹೊಂದಿಸುತ್ತಾರೆ ಕಾದು ನೋಡಬೇಕು ಎಂದು ಮಾರ್ಮಿಕವಾಗಿ ನುಡಿದರು. ಈಗೀನ ಪಂಚರಾಜ್ಯಗಳ ಫಲಿತಾಂಶವನ್ನು ಬಹಳ ಜನ ನಿರೀಕ್ಷೆ ಮಾಡಿದ್ರು, ಆದರೆ ತಮಿಳುನಾಡಿನಲ್ಲಿ ಡಿಎಂಕೆ ಬರುತ್ತೆ ಅಂಥ ಮಾಧ್ಯಮಗಳಲ್ಲಿ ಬರುತ್ತಿತ್ತು, ಆದರೆ ಯಾರೂ ಸಹ ವಿಜಯ್ ಅವರ ಈಗೀನ ಸಾಧನೆಯನ್ನು ನಿರೀಕ್ಷೆ ಮಾಡಿರಲಿಲ್ಲ, ಅದೊಂದು ಮಾತ್ರ ಎಲ್ಲರಿಗೂ ಅಚ್ಚರಿ ಉಂಟು ಮಾಡಿದೆ ಎಂದರು.

ಶೃಂಗೇರಿ ಮರುಎಣಿಕೆ ಸಂಬಂಧ ಪ್ರತಿಕ್ರಿಯಿಸಿ, ಎಫ್‌ಐಆರ್‌ಆಗಿದೆ, ರಾಜೇಗೌಡ್ರು ಚುನಾವಣೆ ಆಯೋಗಕ್ಕೆ ಮತ್ತೊಂದು ದೂರು ಕೊಟ್ಟಿದ್ದಾರೆ. ಏನೇನು ಬೆಳವಣಿಗೆ ಆಗುತ್ತೆ ಅಂಥ ಮುಂದೆ ನೋಡೋಣ. ಈಗಿನ ಪರಿಸ್ಥಿತಿಯಲ್ಲಿ ಓಟ್ ಚೋರಿ ಬಗ್ಗೆ ಚರ್ಚೆ ಮಾಡ್ತರಲ್ಲಾ ಅದಕ್ಕೆ ಯಾವುದೇ ಅರ್ಥ ಇಲ್ಲ. ಓಟ್ ಚೋರಿ ಬಗ್ಗೆ ಚರ್ಚೆ ಮಾಡುವ ನೈತಿಕತೆಯೂ ಇಲ್ಲ. ಕರ್ನಾಟಕದಲ್ಲಿ ಮುಂದಿನ ಚುನಾವಣೆಯಲ್ಲಿ ಬದಲಾ ವಣೆ ಆಗಬಹುದು ಎಂಬುದು ಜನಸಾಮಾನ್ಯರ ಚರ್ಚೆ ಇದೆ. ಕಾದು ನೋಡೋಣ ಏನೇನು ಆಗುತ್ತೆ ಅಂಥ ಮತ್ತು ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷಗಳು ಸ್ವತಂತ್ರ ವಾಗಿ ಅಧಿಕಾರಕ್ಕೆ ಬರುವ ವಾತಾವರಣ ಇಲ್ಲ, ಇಲ್ಲಿಯ ರಾಜಕಾರಣಕ್ಕೂ, ಬೇರೆ ರಾಜ್ಯಗಳ ರಾಜಕಾರಣಕ್ಕೂ ಬಹಳಷ್ಟು ವ್ಯತ್ಯಾಸವಿದೆ ಎಂದರು.

ದೀದಿಯದ್ದು ಬಾಲಿಶ ಹೇಳಿಕೆ: ಇಡಿ, ಐಟಿ ದುರುಪಯೋಗ ಎಂಬ ಕಾಂಗ್ರೆಸ್ ಆರೋಪ ಸಂಬಂಧ ಕೇಳಿದ ಪ್ರಶ್ನೆಗೆ ಉತ್ತರಿಸಿ, ಅವರಿಗೆ ಬೇಕಾದಂತೆ ಕಾಂಗ್ರೆಸ್‌ನವರು ವ್ಯಾಖ್ಯಾನ ಮಾಡ್ತಾರೆ, ಅವರಿಗೆ ಬೇಕಾದಾಗ ಚೆನ್ನಾಗಿದೆ ಅಂತರೆ, ಸೋತಾಗ ಚೆನ್ನಾಗಿಲ್ಲ ಅಂತಾರೆ, ಪಶ್ಚಿಮ ಬಂಗಾಳದಲ್ಲಿ ಸ್ಪಷ್ಟ ಬಹುಮತ ಬಂದಿದೆ ಎಂದು ಎಲೆಕ್ಷನ್ ಕಮಿಷನ್ ನಿಂದ ಘೋಷಣೆ ಆದ ಮೇಲೆ ಮುಗಿತು, ಮಮತಾ ಬ್ಯಾನರ್ಜಿಯವರು ರಾಜೀನಾಮೆ ಕೊಡಲ್ಲ ಎನ್ನುವುದು ಬಾಲಿಶವಾದ ಹೇಳಿಕೆ, ಆ ರೀತಿಯ ವಾತಾವರಣ ನಮ್ಮ ಸಂವಿಧಾನದಲ್ಲಿ ಇಲ್ಲ ಮದು ಮಮತಾ ಬ್ಯಾನರ್ಜಿ ವರ್ತನೆಗೆ ಬೇಸರ ವ್ಯಕ್ತಪಡಿಸಿದರು.

ಬಿಎಸ್‌ವೈ ಕಾರ್ಯಕ್ರಮಕ್ಕೆ 2500ಕಾರ್ಯಕರ್ತರು

ಪಾವಗಡ: ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸಕ್ಕೆ ತಾಲೂಕಿನಿಂದ2500ಸಾವಿರಕ್ಕಿಂತಹೆಚ್ಚಿನಕಾರ್ಯಕರ್ತರು ತೆರಳಿ ಸಮಾರಂಭದಲ್ಲಿ ಭಾಗವಹಿಸುವುದಾಗಿ ತಾಲೂಕು ಬಿಜೆಪಿ ಘಟಕದ ಅಧ್ಯಕ್ಷರಾದ ದೊಡ್ಡಹಳ್ಳಿ ಡಿ.ಆರ್. ಅಶೋಕ್ ತಿಳಿಸಿದ್ದಾರೆ.ಈ ಕುರಿತು ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ತಾಲೂಕಿನ 34ಗ್ರಾಪಂಗಳ ಕಾರ್ಯಕರ್ತರನ್ನು ಕರೆತರುವ ಮೂಲಕ ಪಾವಗಡದಿಂದ ಚಳ್ಳಕರೆ ಮಾರ್ಗವಾಗಿ ಚಿತ್ರದುರ್ಗಕ್ಕೆ ಪ್ರಯಾಣ ಬೆಳೆಸಲಿದ್ದೇವೆ. ಆಯಾ ಗ್ರಾಮದ ಸ್ಥಳೀಯ ಮುಖಂಡರು ಮತ್ತು ತಾಲೂಕು ಬಿಜೆಪಿ ಘಟಕದ ಮುಖಂಡರು ನೇತೃತ್ವವಹಿಸಲಾಗಿದೆ. ಯಡಿಯೂರಪ್ಪ ಅವರು, ಒಬ್ಬ ಸರಳ ಸಜ್ಜನಿಕೆಯ ಮುಖಂಡರಾಗಿದ್ದು, ಸಿಎಂ ಅವಧಿಯಲ್ಲಿ ಅನೇಕ ಯೋಜನೆ ರೂಪಿಸುವ ಮೂಲಕ ರಾಜ್ಯದ ಜನಮನದಲ್ಲಿ ಶಾಶ್ವತವಾಗಿ ಉಳಿದಿ ದ್ದಾರೆ. ಅವರು ಜನಪರ ನಾಯಕರಾಗಿದ್ದಾರೆ. ಶಿಸ್ತು, ಪಕ್ಷ ಸಂಘಟನೆ ಹಾಗೂ ಅವರು ರೂಪಿಸಿದ್ದ ಜನಪರ ಯೋಜನೆಗಳು ಅವರನ್ನುಎತ್ತರಕ್ಕೆಕೊಂಡ್ಯೂಯ್ದಿದ್ದು,ಅವರಆದರ್ಶ,ಶಿಸ್ತು ಹಾಗೂ ಪಕ್ಷ ಸಂಘಟನೆ ನಮಗೆಲ್ಲ ಪ್ರೇರಣೆ ಹಾಗೂ ಮಾದರಿ ಎಂದು ತಿಳಿಸಿ,ಬಿಎಸ್‌ವೈ ಸಮಾರಂಭಕ್ಕೆ ಶುಭಾಶಯ ಕೋರಿದರು.